ಸಂಪುಟ: 01 ಸಂಚಿಕೆ: 59 ಪುಟ: 04 ಬೆಲೆ: 02 ಭಾನುವಾರ ಆಗಸ್ಟ್ 09 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 59 Pages:04 Price:02 SUNDAY AUGUST 09 2026 RNI NO: KNKAN/26/A4008 E-mail:ajathashathru2026@gmail.com

## ಎಎಲ್‌ಬಿಸಿ ಕಾಲುವೆ ಹೂಳು ಮುಕ್ತಗೊಳಿಸುವಂತೆ ರೈತರ ಆಗ್ರಹ; ಕೆಬಿಜೆಎನ್‌ಎಲ್ ವಿರುದ್ಧ ಆಕ್ರೋಶ

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ತಾಲ್ಲೂಕಿನ ಚವನಭಾವಿ ಗ್ರಾಮದ ವ್ಯಾಪ್ತಿಯಲ್ಲಿ ರೈತರ ಜಮೀನುಗಳಿಗೆ ನೀರುಣಿಸುವ ಎಎಲ್‌ಬಿಸಿ ಕಾಲುವೆ (ಡಿಸ್ಟ್ರಿಬ್ಯೂಟರ್–39) ನಿರ್ವಹಣೆ ಇಲ್ಲದೆ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕಾಲುವೆಯಲ್ಲಿ ಹೂಳು, ಕಸ, ಕಲ್ಲು ಮತ್ತು ಮುಳ್ಳಿನ ಗಿಡಗಂಟಿಗಳು ಬೆಳೆದಿರುವುದರಿಂದ ನೀರು ಸರಾಗವಾಗಿ ಹರಿಯುತ್ತಿಲ್ಲ ಎಂದು ರೈತರು ದೂರಿದ್ದಾರೆ.**



ನಾಲತವಾಡ, ಅರೇಶಂಕರ, ಕಮಲಾಪುರ ಹಾಗೂ ಎಣ್ಣಿವಡಗೇರಿ ಮಾರ್ಗವಾಗಿ ಚವನಭಾವಿ ಗ್ರಾಮಕ್ಕೆ ಬರುವ ಈ ಕಾಲುವೆಯಲ್ಲಿ ಕಳೆದ ಐದು ವರ್ಷಗಳಿಂದ ಹೂಳು ತೆಗೆಸಿಲ್ಲ. ಮಳೆ ಕಡಿಮೆಯಾಗಿರುವುದರಿಂದ ರೈತರು ಕಷ್ಟಪಟ್ಟು ಬೆಳೆದಿರುವ ಬೆಳೆಗಳಿಗೆ ನೀರಿನ ತುರ್ತು ಅವಶ್ಯಕತೆ ಇದೆ. ಆದರೆ, ಕಾಲುವೆಯ ಹೂಳಿನಿಂದಾಗಿ ನೀರು ಜಮೀನುಗಳಿಗೆ ತಲುಪದೆ ಬೆಳೆಗಳು ಒಣಗುವ ಆತಂಕ ಎದುರಾಗಿದೆ. ಜೊತೆಗೆ ಜಾನುವಾರುಗಳಿಗೂ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಕೂಡಲೇ ಕಾಲುವೆ ಸ್ವಚ್ಛಗೊಳಿಸಿ ನೀರು ಹರಿಸಬೇಕು, ಇಲ್ಲದಿದ್ದರೆ ಕೆಬಿಜೆಎನ್‌ಎಲ್ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ರೈತರು ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಮಲ್ಲಪ್ಪ ಮಾಲಿನ, ಅಂಬ್ರೇಶ ನಾಲತವಾಡ, ಸಿದ್ದಪ್ಪ ಗುರಿಕಾರ, ಸಿದ್ದಪ್ಪ ಚಲವಾದಿ, ಹಣಮಂತ ಗೋಗಿ, ಲಕ್ಷ್ಮಣ ಈಳಗೇರ, ಶಿವಪ್ಪ ಕಾರಕೂರ, ಹಣಮಂತ ನಾಲತವಾಡ, ಯಮನಪ್ಪ ಬಿರಾದಾರ, ಸಂಗಪ್ಪ ಕುಂಬಾರ, ಗದ್ದೆಪ್ಪ ನಾಲತವಾಡ, ಲಕ್ಕಪ್ಪ ನಾಲತವಾಡ, ಮೌನೇಶ ಬಿರಾದಾರ, ಜಕ್ಕಪ್ಪ ನಾಲತವಾಡ, ಯಮನಪ್ಪ ಚಲವಾದಿ, ಭೀರಪ್ಪ ಮದರಿ, ಶಂಕ್ರಯ್ಯ ಹಿರೇಮಠ, ಶಿವಪ್ಪ ಮದರಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಮಹಿಳೆಯರಿಗೆ ತಕ್ಷಣ ಕಾನೂನು ನೆರವು ಒದಗಿಸಬೇಕು

# ನ್ಯಾ ಬಿ.ವಿ. ನಾಗರತ್ನ

**ಬೆಂಗಳೂರು: ಮಹಿಳೆಯರಿಗೆ ಯಾವುದೇ ಘಟನೆ ಸಂಭವಿಸಿದ ತಕ್ಷಣವೇ ಕಾನೂನು ನೆರವು ದೊರೆಯುವಂತಿರಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಪ್ರತಿಪಾದಿಸಿದ್ದಾರೆ. ಇದೇ ವೇಳೆ, ನಿಯಮಿತ ಮೊದಲ ಮೇಲ್ಮನವಿಗಳನ್ನು ವಿಚಾರಿಸುವ ಕರ್ನಾಟಕ ಹೈಕೋರ್ಟ್‌ನ ಅಧಿಕಾರವನ್ನು ಮೊಟಕುಗೊಳಿಸಿರುವ ಇತ್ತೀಚಿನ ತಿದ್ದುಪಡಿಗಳ ಬಗ್ಗೆಯೂ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.**

ರಾಷ್ಟ್ರೀಯ ಮಹಿಳಾ ಆಯೋಗವು ಕರ್ನಾಟಕ ಹೈಕೋರ್ಟ್ ಮತ್ತು ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಹಯೋಗದಲ್ಲಿ ಆಯೋಜಿಸಿರುವ ಮಹಿಳೆಯರಿಗೆ ನ್ಯಾಯ ವಿಷಯದ ಎರಡು ದಿನಗಳ ದಕ್ಷಿಣ ವಲಯ ಪ್ರಾದೇಶಿಕ ಸಮೇಳನವನ್ನು ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು. ಘಟನೆ ನಡೆದ ತಕ್ಷಣವೇ ಪೊಲೀಸ್ ಠಾಣೆ ಅಥ–ವಾ ಆಸ್ಪತ್ರೆಗಳಲ್ಲಿ ಮಹಿಳೆಯರಿಗೆ ಕಾನೂನು ನೆರವು ದೊರೆಯುವ ವ್ಯವಸ್ಥೆ ಇರಬೇಕು ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳಿಂದ ತಾಲೂಕು ಮಟ್ಟದವರೆಗೆ ಇರುವ ವ್ಯವಸ್ಥೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಗ್ರಾಮೀಣ ಸರ್ಕಾರಿ ಆಸ್ಪತ್ರೆಗಳು ಮತ್ತು ಪೊಲೀಸ್ ಠಾಣೆಗಳ ನಡುವೆ ಸಮನ್ವಯ ಕಲ್ಪಿಸುವ ಸುಸಂಘಟಿತ ವ್ಯವಸ್ಥೆ ರೂಪಿಸಬೇಕು ಎಂದು ಅವರು ಸಲಹೆ ನೀಡಿದರು. ಕಾನೂನು ನೆರವು ಪಡೆದ ಫಲಾನುಭವಿಗಳ



ಸಂಖ್ಯೆಯನ್ನು ಮಾತ್ರ ಪರಿಗಣಿಸುವ ಬದಲು, ಆ ನೆರವಿನಿಂದ ದೊರೆತ ಪರಿಣಾಮ ಮತ್ತು ಫಲಿತಾಂಶದ ಆಧಾರದ ಮೇಲೆ ಅದರ ಪರಿಣಾಮಕಾರಿತ್ವವನ್ನು ಅಧ್ಯಯನ ಮಾಡಬೇಕು ಎಂದು ಅವರು ಹೇಳಿದರು. ಮಹಿಳೆಯರಿಗೆ ತ್ವರಿತ ಪರಿಹಾರ ಒದಗಿಸಲು ಪ್ಯಾರಾಲೀಗಲ್ ಸ್ವಯಂಸೇವಕರು ಕಡಿಮೆ ಸಮಯದಲ್ಲಿ ಲಭ್ಯವಾಗುವಂತಿರಬೇಕು ಎಂದರು.

ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ನೀಡಿರುವ ಅಂಕಿ ಅಂಶಗಳನ್ನು ಉಲ್ಲೇಖಿಸಿದ ಅವರು,2025ರ ಏಪ್ರಿಲ್‌ನಿಂದ 2026ರ ಮಾರ್ಚ್‌ವರೆಗೆ 4,14,795 ಮಹಿಳೆಯರು ಕಾನೂನು ನೆರವು ಪಡೆದಿದ್ದಾರೆ. ಇದು ಶ್ಲಾಘನೀಯ ಸಾಧನೆ ಎಂದು ಹೇಳಿದರು. ಸುಪ್ರೀಂ ಕೋರ್ಟ್ ಕಾನೂನು ಸೇವಾ ಸಮಿತಿಯ ಅಧ್ಯಕ್ಷೆಯಾಗಿ, ಹೈಕೋರ್ಟ್‌ನಲ್ಲಿ ಕಾನೂನು ನೆರವಿನ ಮೂಲಕ ಪ್ರಕರಣವೊಂದು ಇತ್ಯರ್ಥವಾದಾಗ ಅದರ ಮಾಹಿತಿಯನ್ನು ಸುಪ್ರೀಂ ಕೋರ್ಟ್ ಕಾನೂನು ಸೇವಾ ಸಮಿತಿಗೆ ಕಳುಹಿಸಬೇಕು. ಸೋತ ಪಕ್ಷ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಬಯಸಿದರೆ, ಈ ಮುನ್ನೆಚ್ಚರಿಕೆಯ ಮಾಹಿತಿ ನೆರವಾಗಲಿದೆ ಎಂದು ಅವರು ಹೇಳಿದರು.

ಹೈಕೋರ್ಟ್ ಅಧಿಕಾರ ಮೊಟಕಿಗೆ ಆಕ್ಷೇಪ: ಕರ್ನಾಟಕಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾಪಿಸಿದ ನ್ಯಾಯಮೂರ್ತಿ ನಾಗರತ್ನ, ಕರ್ನಾಟಕ ಸಿವಿಲ್ ಕೋರ್ಟ್‌ಗಳ ತಿದ್ದುಪಡಿ ಕಾಯ್ದೆ, 2023 ಮತ್ತು ಕರ್ನಾಟಕ ಹೈಕೋರ್ಟ್ ತಿದ್ದುಪಡಿ ಕಾಯ್ದೆ, 2023ರ ಇತ್ತೀಚಿನ ತಿದ್ದುಪಡಿಗಳಿಂದ ನಿಯಮಿತ ಮೊದಲ ಮೇಲನವಿಗಳನ್ನು ವಿಚಾರಿಸುವ ಹೈಕೋರ್ಟ್‌ನ ಅಧಿಕಾರ ಮೊಟಕುಗೊಂಡಿದೆ ಎಂದು ಹೇಳಿದರು. ತಿದ್ದುಪಡಿ ವ್ಯವಸ್ಥೆಯಡಿ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ನೀಡುವ ತೀರ್ಪು ಮತ್ತು ಡಿಕ್ರಿ ವಿರುದ್ಧ ಮೇಲ್ಮನವಿ ಹೈಕೋರ್ಟ್ ಬದಲಿಗೆ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಬೇಕಾಗುತ್ತದೆ ಎಂದು ಅವರು ವಿವರಿಸಿದರು. ಆಸ್ತಿ ಅವಿಭಕ್ತ ಕುಟುಂಬದ ಆಸ್ತಿಯೇ ಅಥವಾ ಪ್ರತ್ಯೇಕ ಆಸ್ತಿಯೇ ಎಂಬಂತಹ ವಾಸ್ತವಾಂಶಗಳ ಕುರಿತು ತೀರ್ಪಿನಿಂದ ಅನ್ಯಾಯಕ್ಕೊಳಗಾದ ಮಹಿಳೆಯರು ಸಂವಿಧಾನದ ವಿಧಿ 136ರ ಅಡಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಹೇಗೆ ತೆರಳಲು ಸಾಧ್ಯ ಎಂದು ಅವರು ಪ್ರಶ್ನಿಸಿದರು. ಕರ್ನಾಟಕದಲ್ಲಿ ಎಷ್ಟು ಮಹಿಳೆಯರು ಸುಪ್ರೀಂ ಕೋರ್ಟ್‌ಗೆ ತೆರಳಲು ಸಾಧ್ಯ ನಿಯಮಿತ ಮೊದಲ ಮೇಲ್ಮನವಿಗಳ ವಿಚಾರದಲ್ಲಿ ಕರ್ನಾಟಕ ಹೈಕೋರ್ಟ್‌ನ ಅಧಿಕಾರವನ್ನು ರಾಜ್ಯ ಸರ್ಕಾರ ಏಕೆ ಮೊಟಕುಗೊಳಿಸಿದೆ ಎಂಬುದು ನನಗೆ ಆಶ್ಚರ್ಯವಾಗುತ್ತದೆ ಎಂದು ಅವರು ಹೇಳಿದರು. ಈ ಕ್ರಮವು ಪ್ರಕರಣಗಳನ್ನು ನಿರ್ಧರಿಸುವ ಹೈಕೋರ್ಟ್‌ನ ಸ್ವಾಯತ್ತತೆಗೆ ಅಡ್ಡಿಪಡಿಸುವುದಲ್ಲದೆ, ಮಹಿಳಾ ಅರ್ಜಿದಾರರಿಗೆ ಅನನುಕೂಲ ಉಂಟುಮಾಡುತ್ತದೆ. ಇತರ ರಾಜ್ಯಗಳಲ್ಲಿನ ಅರ್ಜಿದಾರರಿಗೆ ಹೋಲಿಸಿದರೆ ಕರ್ನಾಟಕದ ಪುರುಷ ಅರ್ಜಿದಾರರೂ ಈ ವ್ಯವಸ್ಥೆಯಿಂದ ಅನನುಕೂಲಕ್ಕೊಳಗಾಗುತ್ತಿದ್ದಾರೆ ಎಂದು ಅವರು ಹೇಳಿದರು.ರಾಜ್ಯ ಸರ್ಕಾರ ಮತ್ತು ಅಡ್ವೊಕೇಟ್ ಜನರಲ್ ಈ ನಿಬಂಧನೆಯನ್ನು ತಿದ್ದುಪಡಿ ಮಾಡಿ ರದ್ದುಪಡಿಸುವಂತೆ ಅವರು ಮನವಿ ಮಾಡಿದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಸತ್ಯವಾಣಿ

ಅಹಂ ಕೋಟೆ ಎಷ್ಟೆ
ಬಲಿಷ್ಟವಾಗಿದ್ದರೂ
ಸಾತ್ವಿಕ ಸಜ್ಜನರು ಸರಾಗವಾಗಿ
ಆ ಕೋಟೆಯನ್ನು ಭೇದಿಸಿ
ಶ್ವೇತ ಗುಲಾಬಿ ನೆಡುವ ಸಾಹಸ
ಮಾಡಿರುತ್ತಾರೆ.ಆದರೆ ಒಳಗಣ್ಣನ್ನು
ತೆರದು ಆ ಘಮವನ್ನು
ಆಸ್ವಾದಿಸುವ ಮನಸ್ಸು ಕೋಟೆಯ
ಮಾಲೀಕನಿಗಿರಬೇಕಷ್ಟೆ.



ವಾಣಿ ಭಂಡಾರಿ.

## ವಲಯ ಮಟ್ಟದ ಕ್ರೀಡಾಕೂಟ: ಕೆಪಿಎಸ್ ಮಂಗಳೂರು ವಿದ್ಯಾರ್ಥಿಗಳ ಅಮೋಘ ಸಾಧನೆ

ಅ.ಶ. ಸುದ್ದಿ ಕುಕನೂರು

**ಕುಕುನೂರು: ಇತ್ತೀಚೆಗೆ ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಲಯ ಮಟ್ಟದ ಕ್ರೀಡಾಕೂಟಗಳು ನಡೆದವು. ಕ್ರೀಡಾಕೂಟದಲ್ಲಿ ಕೆಪಿಎಸ್ ಮಂಗಳೂ–ರಿನ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ತೋರಿ ಶಾಲೆಗೆ ಕೀರ್ತಿ ತಂದಿದ್ದಾರೆ.**

ಬಾಲಕರ ಕಬಡ್ಡಿ ಹಾಗೂ ಬಾಲಕಿಂ–ಯರ ವಾಲಿಬಾಲ್ ತಂಡಗಳು ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಸತತ ಎರಡನೇ ಬಾರಿಗೆ ಆಯ್ಕೆಯಾಗಿವೆ. ಇದೇ ವೇಳೆ ಸರಪಳಿ ಗುಂಡು ಎಸೆತದಲ್ಲಿ ಹನುಮೇಶ್ ಬೆವಿನಗಿಡದ್ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳಾದ ತರುಣ್, ಶ್ರೀದೇವಿ, ಸಂಜನಾ, ಪ್ರಜ್ವಲ್ ಕಟ್ಟಿಮನಿ, ನವೀನ್ ಕುಮಾರ್, ಶಶಿಕಲಾ ಸೇರಿದಂತೆ ಹಲವು ವಿದ್ಯಾರ್ಥಿಗಳು ವಿವಿಧ



ಕ್ರೀಡಾ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ತೋರಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಅಭಿನಂದನೆ ತಾಲೂಕು ಮಟ್ಟಕ್ಕೆ ಆಯ್ಕೆಯಾದ ಎಲ್ಲಾ ಕ್ರೀಡಾಪಟುಗಳಿಗೆ ಎಸ್‌ಡಿಎಂಸಿ ಉಪಾಧ್ಯಕ್ಷ ಅನಿಲ್ ಕುಮಾರ್ ಎಂ. ಕಲ್ಭಾವಿ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ ಬನಿಗೋಳ್, ಪ್ರಾಂಶುಪಾಲ ಗೋಪಾಲಯ್ಯ ಟಿ., ಉಪಪ್ರಾಂಶುಪಾಲ



ಹನಮಂತಪ್ಪ ಆವಾರದಮನಿ, ತಾಲೂಕು ದೈಹಿಕ ಪರಿವೀಕ್ಷಕ ಶರಣಪ್ಪ ವೀರಾಪೂರ, ಮುಖ್ಯೋಪಾಧ್ಯಾಯರಾದ ಶಕುಂತಲಾ ಮಾಲಿಪಾಟೀಲ್, ಸ್ಥಾಯಿ ಸಮಿತಿ ಅಧ್ಯಕ್ಷರು, ನಾಮನಿರ್ದೇಶಿತ ಸದಸ್ಯರು, ಶಾಲೆಯ ದೈಹಿಕ ಶಿಕ್ಷಕಿ ಲಕ್ಷ್ಮೀದೇವಿ ಸೇರಿದಂತೆ ಶಿಕ್ಷಕರು ಹಾಗೂ ಕ್ರೀಡಾಪ್ರೇಮಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ ಸೋಮಪ್ಪ ನಾಯಕ್, ರವಿ ಡಿ. ಮಳಗಿ, ಮಹಾವೀರ ಕಲ್ಭಾವಿ, ಆನಂದ ಚಿನ್ನೂರ್, ಬಾಬುಸಾಬ ಗುಡಿಹಿಂದಲ್ ಹಾಗೂ ಇತರ ಶಿಕ್ಷಕರನ್ನು ಗ್ರಾಮಸ್ಥರು ಅಭಿನಂದಿಸಿದ್ದಾರೆ.

## ಅವಘಡದಿಂದ ಬಚಾವಾದ ಬುಲೆರೋ: ಅಮೃತ್ 2.0 ಕಾಮಗಾರಿಗೆ ಮುನ್ನೆಚ್ಚರಿಕೆ ಕ್ರಮಗಳ ಕೊರತೆ

### ರಸ್ತೆ ಬದಿಯಲ್ಲಿ ನೀರು ನಿಂತು ವಾಹನದ ಚಕ್ರ ಸಿಲುಕಿ ಆತಂಕ; ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣದ ಪ್ರಮುಖ ರಸ್ತೆಯಾಗಿರುವ ಕುಕನೂರು?ಗದಗ ರಸ್ತೆಯಲ್ಲಿ ನಡೆಯುತ್ತಿರುವ ಅಮೃತ್ 2.0 ಯೋಜನೆಯ ಕಾಮಗಾರಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ರಸ್ತೆ ಬದಿಯಲ್ಲಿ ಕಾಮಗಾರಿಗಾಗಿ ಮಣ್ಣು ಅಗೆಯಲಾಗಿದ್ದು, ಶನಿವಾರದಂದು ಸುರಿದ ಮಳೆಯಿಂದಾಗಿ ಕಾಮಗಾರಿ ಸ್ಥಳದಲ್ಲಿ ನೀರು ನಿಂತ ಪರಿಣಾಮ ಬುಲೆರೋ ವಾಹನದ ಚಕ್ರ ಸಿಲುಕಿ ಅವಘಡ ಸಂಭವಿಸಿದ ಘಟನೆ ಪಟ್ಟಣದ ಅಂಬೇಡ್ಕರ್ ವೃತ್ತದ ಸಮೀಪ ನಡೆದಿದೆ.**

ಅಂಬೇಡ್ಕರ್ ಸರ್ಕಲ್ ಬಳಿಯ ಗದಗ ರಸ್ತೆಯ ಪಕ್ಕದಲ್ಲಿ ಅಮೃತ್ 2.0 ಯೋಜನೆಯಡಿ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿಗಾಗಿ ರಸ್ತೆ ಬದಿಯಲ್ಲಿ ಮಣ್ಣು ಅಗೆಯಲಾಗಿದ್ದು, ಮಳೆ ಸುರಿದ ನಂತರ ಆ ಭಾಗದಲ್ಲಿ ನೀರು ನಿಂತು ಕೆಸರುಮಯವಾಗಿತ್ತು. ಈ ಸಂದರ್ಭದಲ್ಲಿ ರಸ್ತೆಯ ಪಕ್ಕದಲ್ಲಿ ಸಾಗುತ್ತಿದ್ದ ಬುಲೆರೋ ವಾಹನದ ಚಕ್ರ ಮಣ್ಣಿನಲ್ಲಿ ಸಿಲುಕಿಕೊಂಡು ವಾಹನ ನಿಯಂತ್ರಣ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಘಟನೆಯನ್ನು ಗಮನಿಸಿದ ಸ್ಥಳೀಯರು ತಕ್ಷಣ



ನೆರವಿಗೆ ಧಾವಿಸಿದ್ದು, ಜೆಸಿಬಿ ಯಂತ್ರದ ಸಹಾಯದಿಂದ ವಾಹನವನ್ನು ಸುರಕ್ಷಿತವಾಗಿ ಹೊರತೆಗೆಯಲಾಯಿತು.

ಇದರಿಂದ ಸಂಭವಿಸಬಹುದಾಗಿದ್ದ ದೊಡ್ಡ ಅವಘಡವೊಂದು ತಪ್ಪಿದಂತಾಗಿದೆ. ದೊಡ್ಡ ಅನಾಹುತ ತಪ್ಪಿದ್ದು ಅದೃಷ್ಟ ಈ ರಸ್ತೆ ಪಟ್ಟಣದ ಪ್ರಮುಖ ಸಂಪರ್ಕ ರಸ್ತೆಯಾಗಿದ್ದು, ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಬಸ್‌ಗಳು, ಶಾಲಾ ವಾಹನಗಳು, ದ್ವಿಚಕ್ರ ವಾಹನಗಳು ಸೇರಿದಂತೆ ವಿವಿಧ ವಾಹನಗಳ ಸಂಚಾರ ಹೆಚ್ಚಾಗಿರುವ ಪ್ರದೇಶದಲ್ಲಿ ಕಾಮಗಾರಿ ನಡೆಸುವಾಗ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಆದರೆ ಕಾಮಗಾರಿ ಸ್ಥಳದಲ್ಲಿ ಸಮರ್ಪಕ ಬ್ಯಾ–ರಿಕೇಡ್, ಎಚ್ಚರಿಕೆ ಫಲಕ ಹಾಗೂ ವಾಹನ ಸವಾರ–ರಿಗೆ ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆ ಇಲ್ಲದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಅದೇ ಸಂದರ್ಭದಲ್ಲಿ ಜನರಿಂದ ತುಂಬಿದ ಬಸ್ ಅಥವಾ ಮತ್ತಾವುದೇ ದೊಡ್ಡ ವಾಹನ ಈ ಸ್ಥಳದಲ್ಲಿ ಸಿಲುಕಿಕೊಂಡಿದ್ದರೆ, ಪರಿಸ್ಥಿತಿ ಗಂಭೀರವಾಗುವ ಸಾಧ್ಯತೆ ಇತ್ತು.

ಅದೃಷ್ಟವಶಾತ್ ಬುಲೆರೋ ವಾಹನ ಮಾತ್ರ ಸಿಲುಕಿಕೊಂಡಿದ್ದು, ಯಾವುದೇ ಪ್ರಾಣಹಾನಿ ಸಂಭವಿಸದೆ ಚಾಲಕ ಹಾಗೂ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಅಧಿಕಾರಿಗಳ ವಿರುದ್ಧ ಸಾರ್ವಜನಿಕರ ಆಕ್ರೋಶ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟುಮಾಡುತ್ತಿರುವ ಬಗ್ಗೆ ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದರು. ಕಾಮಗಾರಿ ಮಾಡುವುದು ಅಭಿವೃದ್ಧಿಯ ಭಾಗವಾದರೂ, ಸಾರ್ವಜನಿಕರ ಜೀವ ಮತ್ತು ಸುರಕ್ಷತೆಗೆ ಆದ–್ಯತೆ ನೀಡುವುದು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಜವಾಬ್ದಾರಿಯಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಮಳೆಗಾಲದಲ್ಲಿ ರಸ್ತೆ ಬದಿಯಲ್ಲಿ ಮಣ್ಣು ಅಗೆಯುವ ಕಾಮಗಾರಿ ಕೈಗೊಂಡಿರುವುದ–ರಿಂದ ಮಣ್ಣು ಕುಸಿಯುವ ಹಾಗೂ ವಾಹನಗಳು ಸಿಲುಕಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ ಕಾಮಗಾರಿ ಸ್ಥಳದಲ್ಲಿ ತಕ್ಷಣವೇ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಎಚ್ಚರಿಕೆ ಫಲಕಗಳನ್ನು ಹಾಕಬೇಕು. ರಾತ್ರಿ ಸಮಯದಲ್ಲಿ ವಾಹನ ಸವಾರ–ರಿಗೆ ಕಾಮಗಾರಿ ಸ್ಥಳ ಸ್ಪಷ್ಟವಾಗಿ ಗೋಚ–ರಿಸುವಂತೆ ಸೂಕ್ತ ಸುರಕ್ಷತಾ ವ್ಯವಸ್ಥೆ ಮಾಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ತಕ್ಷಣ ಕ್ರಮ ಕೈಗೊಳ್ಳುವಂತೆ ಆಗ್ರಹ ಕುಕನೂರು ಪಟ್ಟಣದ ಪ್ರಮುಖ ರಸ್ತೆಯಲ್ಲಿ ಇಂತಹ ಘಟನೆ ಮರುಕಳಿಸದಂತೆ ಸಂಬಂಧಪಟ್ಟ ಅಮೃತ್ 2.0 ಯೋಜನೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪ್ರದೇಶವನ್ನು ಪರಿಶೀಲಿಸಬೇಕು.

ರಸ್ತೆ ಬದಿಯಲ್ಲಿ ನಿಂತಿರುವ ನೀರನ್ನು ತೆರವುಗೊಳಿಸಿ, ವಾಹನ ಸಂಚಾರಕ್ಕೆ ಯಾವುದೇ ರೀತಿಯ ಅಪಾಯವಾಗದಂತೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಇನ್ನೊಂದು ದೊಡ್ಡ ಅನಾಹುತ ಸಂಭವಿಸುವ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಂಡು, ಕಾಮಗಾರಿ ಸ್ಥಳದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರ ಜೀವ ರಕ್ಷಿಸಬೇಕು ಎಂಬುದು ಸ್ಥಳೀಯರ ಆಗ್ರಹವಾಗಿದೆ.

**ವರದಿ: ಚನ್ನಯ್ಯ ಹಿರೇಮಠ, ಕುಕನೂರು**

# ಭಾರತ್ ಮಾತಾ ಕಿ ಜೈ ಎನ್ನುವವರ ಬಳಿ ವ್ಯಾಪಾರ ಮಾಡಿ : ಭವ್ಯ ಮೋಹನ್ ಗೌಡ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಭಾರತದ ಮಣ್ಣಿನ ಬಗ್ಗೆ ಕೃತಜ್ಞತೆ, ಗೌರವಿಸುವವರ ಬಳಿ ಮಾತ್ರ ಹಿಂದೂಗಳು ವ್ಯಾಪಾರ ಮಾಡಬೇಕು ಪಾಶ್ಚಿಮಾತ್ಯ ಸಂಸ್ಕೃತಿಯ ಗುಲಾಮಗಿರಿಯಿಂದ ನಮ ಮಕ್ಕಳನ್ನು ಹೊರತರುವ ಪ್ರಯತ್ನ ಮನೆಯಿಂದಲೇ ಆರಂಭವಾಗಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ವಕ್ತಾರೆ ಭವ್ಯ ಮೋಹನ್ ಗೌಡ ತಿಳಿಸಿದ್ದಾರೆ.**

ಪತಂಜಲಿ ಯೋಗ ಶಿಕ್ಷಣ ಸಮಿತಿ ಆಯೋಜಿಸಿದ್ದ, ಪ್ರಾಂತ ಪ್ರಶಿಕ್ಷಣ ಮಾತೃ ಭೋಜನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ವಸ್ತುಗಳು ಕಡಿಮೆ ಬೆಲೆಗೆ ಸಿಗುತ್ತೋ ಅಲ್ಲಿ ಖರೀದಿ ಮಾಡುವುದನ್ನು ಬಿಟ್ಟು, ವ್ಯಾಪಾರಿಯು ಭಾರತ್ ಮಾತಾ ಕಿ ಜೈ ಹೇಳ್ತಾರಾ? ಆ ವ್ಯಕ್ತಿ ಈ ಭಾರತದ ನೆಲವನ್ನು ಗೌರವಿಸ್ತಾರಾ? ಆತನಿಗೆ ಭಾರತದ ಮಣ್ಣಿನ ಬಗ್ಗೆ ಕೃತಜ್ಞತೆ ಇದೆಯಾ ಎಂಬುದನ್ನು ವಿಚಾರ ಮಾಡಿ ವ್ಯಾಪಾರ ಮಾಡಬೇಕಾಗಿದೆ ಎಂದು ಹೇಳಿದರು.




ಭಾರತದಲ್ಲಿ ಹುಟ್ಟೋದೇ ಎಷ್ಟೋ ಜನದ ಪುಣ್ಯದ ಫಲ. ನಾವು ಗಿಡ, ಮರ, ಪ್ರಕೃತಿ? ಪ್ರತಿಯೊಂದರಲ್ಲೂ ದೇವರನ್ನು ನೋಡುತ್ತೇವೆ. ಅಂಥ ದೇಶದಲ್ಲಿ ಹುಟ್ಟಿದ ನಾವು ಇಂದು ಪಾಶ್ಚಿಮಾತ್ಯರನ್ನು ಅನುಸರಿಸಿ ನಮ ಸಂಸ್ಕಾರ, ಸಂಸ್ಕೃತಿಯನ್ನು ಮರೆತಿದ್ದೇವೆ ಇದನ್ನು ಸರಿ ಮಾಡುವುದು ನಮೆಲ್ಲರ ಕರ್ತವ್ಯ. ನಮಲ್ಲಿ ಆ ಕ್ಷಾತ್ರ ತೇಜಸ್ಸು ವೃದ್ಧಿಯಾಗಬೇಕು.

ನಮ ಮಕ್ಕಳು ಪಾಶ್ಚಿಮಾತ್ಯ ಸಂಸ್ಕೃತಿಯ ಗುಲಾಮಗಿರಿಯತ್ತ ಆಕರ್ಷಣೆ ಆಗುತ್ತಿದ್ದರೆ, ಅವರಿಗೆ ಸನಾತ ಹಿಂದೂ ಸಂಸ್ಕೃತಿಯಬಗ್ಗೆ ಅರಿವು ಮೂಡಿಸಬೇಕು. ಮನೆಯಿಂದಲೇ ಆರಂಭವಾಗಬೇಕು ಅದಕ್ಕೆ ಅವರ ಹುಟ್ಟುಹಬ್ಬದಂದು ಅವರ ಬಳಿ ಕೇಕ್ ಕತ್ತರಿಸುವ ಬದಲು, ಮನೆಯಲ್ಲೇ ದೀಪ ಬೆಳಗಿಸಿ ಮನೆಯ ಹಿರಿಯರ ಆಶೀರ್ವಾದ ಪಡೆದು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಪದ್ಧತಿ ಪ್ರಕಾರನೇ ಆಚರಣೆ ಮಾಡುವ ಮೂಲಕ ಪಾಶ್ಚಿಮಾತ್ಯ ಸಂಸ್ಕೃತಿಯ ಗುಲಾಮಗಿರಿಯಾ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು. ದೀಪ ಅರಿದರೆ, ಫೋಟೋ ಕೆಳಗೆ ಬಿದ್ರೆ ಅಶುಭ, ಆದ್ರೆ ಇಂದು ಮಗು ಎಷ್ಟು ಕೆಜಿ ಇದೆಯೋ ಅಷ್ಟು ಕೆಜಿಯ ಕೇಕ್ ಮೇಲೆ ಆ ಮಗುವಿನ ಫುಲ್ ಫೋಟೋ ಹಾಕಿ ಕ್ಯಾಂಡಲ್ ಇಟ್ಟು, ಮಗುವಿನ ಕೈಯಲ್ಲಿ ಚಾಕುವಿನಿಂದ ಕಾಲಿನಿಂದ ಕುತ್ತಿಗೆ ತನಕ ಕತ್ತರಿ ಊರವರನ್ನೆಲ್ಲಾ ಕರೆದು ಮೋಜು-ಮಸ್ತಿ ಮಾಡುತ್ತಾರೆ.

ಇದು ನಮ ಸಂಸ್ಕೃತಿಯ ವಿರುದ್ಧ ಆಚರಣೆಗಳು. ನಮ ಧರ್ಮ ತ್ಯಾಗವನ್ನು ಕಲಿಸಿಕೊಟ್ಟಿದೆ. ಹಿಂದೆ ಪೂರ್ವಜರು ಜನದಿನ ಅಥವಾ ಹಬ್ಬದಂತಹ ವಿಶೇಷ ದಿನಗಳಲ್ಲಿ ತ್ಯಾಗ-ದಾನ ಮಾಡುವುದನ್ನು ಕಲಿಸುತ್ತಿದ್ದರು. ಆದರೆ ಈಗ ಮಕ್ಕಳಿಗೆ ತಮ ಜನದಿನದ ಬಗ್ಗೆ ಗೊತ್ತೇ ಇರುವುದಿಲ್ಲ. ಅಂದರೆ ಪಾಶ್ಚಿಮಾತ್ಯದ ಈ ಗುಲಾಮಗಿರಿ ಯನ್ನು ಕಲಿಸಿದವರು ನಾವೇ. ಅದಕ್ಕೋಸ್ಕರ ಇದರ ಬಗ್ಗೆ ನಾವು ನಮ ಊರುಗಳಲ್ಲಿ ಜಾಗೃತಿ ಮೂಡಿಸೋಣ, ಇದೇ ರಾಷ್ಟ್ರ ಜಾಗೃತಿ. ರಾಷ್ಟ್ರ ರಕ್ಷಣೆಗೆ ನಾವೆಲ್ಲರೂ ಸಜ್ಜಾಗಬೇಕಾಗಿದೆ ಎಂದರು. ಅಡುಗೆ ಕೋಣೆಯಲ್ಲಿ ಅನ್ನಪೂರ್ಣೇಶ್ವರಿ, ಮಕ್ಕಳಿಗೆ ಓದಿಸುವಾಗ ಸರಸ್ವತಿ, ಹಣದ ವಿಚಾರದಲ್ಲಿ ಲಕ್ಷ್ಮಿ ಅಂತ ಮಹಿಳೆಯನ್ನು ಗೌರವಿಸುತ್ತೇವೆ. ಈಗ ಒಂದು ಹೆಜ್ಜೆ ನಾವು ಹೊರಗೆ ಹೋದಾಗ ಎಲ್ಲಾದರೂ ಅನ್ಯಾಯ ಆಗ್ತಾ ಇದೆ, ನಮನ್ನು ಯಾರಾದರೂ ವಕ್ರ ದೃಷ್ಟಿಯಲ್ಲಿ ನೋಡ್ತಾ ಇದ್ದಾರೆ ಅಂದ್ರೆ ನಾವು ಅಲ್ಲಿ ದುರ್ಗೆಯಾಗಬೇಕಾಗಿದೆ! ಇನ್ನು ಅಂತ ಹೆಚ್ಚು ಅಂದ್ರೆ ಚಂಡಿ-ಚಾಮುಂಡಿ ಆಗೋದು ಅವಶ್ಯವಾಗಿದೆ ಎಂದು ಹೇಳಿದರು.

## ಭದ್ರತಾ ಸಿಬ್ಬಂದಿ ಮೇಲೆ ವಾಹನ ಹರಿಸಲು ಯತ್ನ, ಓರ್ವನ ಬಂಧನ

ಅ.ಶ. ಸುದ್ದಿ ಜಮ್ಮು

**ಜಮ್ಮು: ರಾಮಬಾನ್ ಜಿಲ್ಲೆಯ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಸ್‌ಯುವಿ ಭದ್ರತಾ ತಪಾಸಣಾ ಕೇಂದ್ರವನ್ನು ತಪ್ಪಿಸಿದ್ದು, ವಾಹನದಲ್ಲಿದ್ದವರು ವಾಹನವನ್ನು ಬಿಟ್ಟು ಪರಾರಿಯಾಗುವ ಮೊದಲು ಪೊಲೀಸ್ ಸಿಬ್ಬಂದಿ ಮೂರು ಬಾರಿ ಎಚ್ಚರಿಕೆಯ ಗುಂಡು ಹಾರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರೀ ಶೋಧ ಕಾರ್ಯಾಚರಣೆಯ ನಂತರ, ಅವರಲ್ಲಿ ಒಬ್ಬನನ್ನು ಬಂಧಿಸಲಾಯಿತು ಎಂದು ಅವರು ಹೇಳಿದರು.**




ಜೆಕೆ02-ಎಕೆ1743 ನೋಂದಣಿ ಸಂಖ್ಯೆ ಹೊಂದಿರುವ ಕಪ್ಪು ಬಣ್ಣದ ಸ್ಕಾರ್ಪಿಯೋ ಶ್ರೀನಗರದಿಂದ ಜಮ್ಮು ಕಡೆಗೆ ಚಂದರ್‌ಕೋಟೆ ಭದ್ರತಾ ಚೆಕ್‌ಪಾಯಿಂಟ್‌ಗೆ ಬರುತ್ತಿದ್ದಾಗ ಮುಂಜಾನೆ 4 ಗಂಟೆಗೆ ಈ ಘಟನೆ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೊಲೀಸ್ ಸಿಬ್ಬಂದಿ ವಾಹನವನ್ನು ನಿಲ್ಲಿಸಲು ಸೂಚಿಸಿದರು, ಆದರೆ ಚಾಲಕನು ಅನುಸರಿಸುವ ಬದಲು ಚೆಕ್‌ಪಾಯಿಂಟ್ ಕಡೆಗೆ ವೇಗವನ್ನು ಹೆಚ್ಚಿಸಿದನು, ಇದು ಕರ್ತವ್ಯದಲ್ಲಿದ್ದ ಭದ್ರತಾ ಸಿಬ್ಬಂದಿಗೆ ಗಂಭೀರ ಬೆದರಿಕೆಯನ್ನುಂಟುಮಾಡುತ್ತದೆ ಎಂದು ಅವರು ಹೇಳಿದರು. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿಅರುಣ್ ಗುಪ್ತಾ ಅವರು, ಘಟನೆಗೆ ಸ್ವಲ್ಪ ಮೊದಲು ಸ್ಕಾರ್ಪಿಯೋ ಸಮೀಪಿಸುತ್ತಿರುವ ಬಗ್ಗೆ ಚಂದರಕೋಟೆ ಪೊಲೀಸ್ ಠಾಣೆಗೆ ಮಾಹಿತಿ ಬಂದಿದೆ. ನಿಲ್ಲಿಸುವಂತೆ ಸೂಚಿಸಿದಾಗ, ಚಾಲಕನು ಎಚ್ಚರಿಕೆಯನ್ನು ನಿರ್ಲಕ್ಷಿಸಿ ಚೆಕ್‌ಪಾಯಿಂಟ್‌ನತ್ತ ವೇಗವಾಗಿ ಚಲಿಸಿದನು. ವಾಹನವು ತುಂಬಾ ವೇಗದಲ್ಲಿ ಚಲಿಸುತ್ತಿತ್ತು, ಅದು ಯಾವುದೇ ಸಿಬ್ಬಂದಿಗೆ ಡಿಕ್ಕಿ ಹೊಡೆದಿದ್ದರೆ, ಅದು ಜೀವಕ್ಕೆ ಖಚಿತವಾದ ಅಪಾಯವನ್ನುಂಟುಮಾಡುತ್ತದೆ ಎಂದು ಗುಪ್ತಾ ಹೇಳಿದರು. ಅಪಾಯವನ್ನು ಗ್ರಹಿಸಿದ, ಚೆಕ್‌ಪಾಯಿಂಟ್‌ನಲ್ಲಿ ನಿಯೋಜಿಸಲಾದ ಪೊಲೀಸ್ ಸಿಬ್ಬಂದಿಯ ಭಾಗವಾಗಿದ್ದ ಕಾನ್‌ಸ್ಟೆಬಲ್ ರಸಲ್ ಚಂದ್ ಅವರು ತಮ್ಮ ಸೇವಾ ರೈಫಲ್‌ನಿಂದ ಮೂರು ಎಚ್ಚರಿಕೆಯ ಗುಂಡುಗಳನ್ನು ಹಾರಿಸಿದರು ಎಂದು ಎಸ್‌ಎಸ್‌ಪಿ ಹೇಳಿದರು. ಇದರ ಹೊರತಾಗಿಯೂ, ಚಾಲಕ ಮತ್ತು ಅವನ ಸಹಚರರು ವಾಹನದೊಂದಿಗೆ ಸ್ಥಳದಿಂದ ಪರಾರಿಯಾಗಲು ಯಶಸ್ವಿಯಾದರು ಎಂದು ಅವರು ಹೇಳಿದರು.

## ಕುಕನೂರು ಪೂರ್ವ ವಲಯ ಮಟ್ಟದ ಕ್ರೀಡಾಕೂಟ: ಶ್ರೀ ಗವಿಸಿದ್ದೇಶ್ವರ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಅಮೋಘ ಸಾಧನೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಬಳಗೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ನಡೆದ ಕುಕನೂರು ಪೂರ್ವ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಶ್ರೀ ಗವಿಸಿದ್ದೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ವಿವಿಧ ಅಥ್ಲೆಟಿಕ್ಸ್ ಹಾಗೂ ತಂಡಗಳ ಸ್ಪರ್ಧೆಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಪಡೆದು ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.**



ಬಾಲಕರ ವಿಭಾಗದಲ್ಲಿ ಕಾರ್ತಿಕ್ ನಾಯಕ್ 400 ಮೀಟರ್ ಓಟದಲ್ಲಿ ಪ್ರಥಮ ಹಾಗೂ ಉದ್ದ ಜಿಗಿತದಲ್ಲಿ ತೃತೀಯ ಸ್ಥಾನ, ಮನೋಜ್ ಬಳ್ಳಾರಿ 800 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ, ಗಿರೀಶ್ ದೊಡ್ಡಮನಿ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ, ಗಣೇಶ್ ಭಜಂತ್ರಿ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನ ಹಾಗೂ ಭರತ್ ಕುಮಾರ್ ತಲ್ಲೂರು 5000 ಮೀಟರ್ ನಡಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಗಮನ ಸೆಳೆದರು. ಜೊತೆಗೆ ಬಾಲಕರ ಥ್ರೋಬಾಲ್ ತಂಡ ಪ್ರಥಮ ಸ್ಥಾನ ಗಳಿಸಿ ತಾಲೂಕು ಮಟ್ಟಕ್ಕೆ ಆಯ್ಕೆಯಾಯಿತು.

ಬಾಲಕಿಯರ ವಿಭಾಗದಲ್ಲಿ ಅನುಷಾ ಸುಳಿಕೇರಿ 100 ಮೀಟರ್ ಓಟದಲ್ಲಿ ದ್ವಿತೀಯ, ಪೂಜಾ ಹಲಸಿನಮರ 400 ಮೀಟರ್ ಓಟದಲ್ಲಿ ದ್ವಿತೀಯ ಹಾಗೂ ತ್ರಿವಿಧ ಜಿಗಿತದಲ್ಲಿ ಪ್ರಥಮ, ಕೀರ್ತನಾ ವಡ್ಡರ್ 400 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದರು.

ಮಲ್ಲಮ್ಮ ಗ್ವಾಲಗೇರಿಮಠ ಬಲ್ಲೆ ಎಸೆತದಲ್ಲಿ ಪ್ರಥಮ, ಅಮೃತ ಇಟಗಿ ಬಲ್ಲೆ ಎಸೆತದಲ್ಲಿ ದ್ವಿತೀಯ, ಸುಷ್ಮಾ ಹೊನ್ನುಂಚಿ ಗುಂಡು ಎಸೆತದಲ್ಲಿ ಪ್ರಥಮ, ಚಕ್ರ ಎಸೆತ ಹಾಗೂ ಸರಪಳಿ ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದರು. ತನುಶ್ರೀ ಸುಳಿಕೇರಿ ಸರಪಳಿ ಗುಂಡು ಎಸೆತದಲ್ಲಿ ಪ್ರಥಮ, ಕಾವೇರಿ ಇಟಗಿ ತ್ರಿವಿಧ ಜಿಗಿತದಲ್ಲಿ ದ್ವಿತೀಯ ಹಾಗೂ ಶ್ವೇತಾ ನಂದಿಕೋಲಮಠ ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನ ಗಳಿಸಿದರು.

ಇದಲ್ಲದೆ ಬಾಲಕಿಯರ 4̥100 ಮೀಟರ್ ಹಾಗೂ 4̥400 ಮೀಟರ್ ರಿಲೇ ತಂಡಗಳು ದ್ವಿತೀಯ ಸ್ಥಾನ, ಕಬಡ್ಡಿ ತಂಡ ದ್ವಿತೀಯ ಸ್ಥಾನ ಮತ್ತು ಥ್ರೋಬಾಲ್ ತಂಡ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಅರ್ಹತೆ ಪಡೆದಿವೆ. ವಿದ್ಯಾರ್ಥಿಗಳ ಈ ಗಮನಾರ್ಹ ಸಾಧನೆಗೆ ಅಭಿನವ ಗವಿಶ್ರೀಗಳು, ಆಡಳಿತ ಮಂಡಳಿ ಸದಸ್ಯರು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

ವರದಿಗಾರರು: ಚನ್ನಯ್ಯ ಹಿರೇಮಠ, ಕುಕನೂರು

# 40 ವರ್ಷ ಹಳೆಯ ಶಿಥಿಲಗೊಂಡಿದ್ದ ಓವರ್‌ಹೆಡ್ ತೆರವು



ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಸಾರ್ವಜನಿಕರ ಸುರಕ್ಷತೆಗೆ ಅಪಾಯಕಾರಿಯಾಗಿದ್ದ 40 ವರ್ಷ ಹಳೆಯ ಶಿಥಿಲಗೊಂಡ ಓವರ್‌ಹೆಡ್ ನೀರಿನ ಟ್ಯಾಂಕ್‌ನ್ನು ಬೆಂಗಳೂರು ಪೂರ್ವ ನಗರ ಪಾಲಿಕೆ ಅಧಿಕಾರಿಗಳು ಶುಕ್ರವಾರ ಸುರಕ್ಷಿತವಾಗಿ ತೆರವುಗೊಳಿಸಿದರು. ಹೂಡಿ ವಾರ್ಡ್‌ನ ಭೈರತಿ ಬಂಡೆ ಪ್ರದೇಶದಲ್ಲಿದ್ದ ಈ ಟ್ಯಾಂಕ್ ಕಳೆದ 10 ವರ್ಷಗಳಿಂದ ಬಳಕೆಯಲ್ಲಿರಲಿಲ್ಲ. ನಿರ್ವಹಣೆ ಕೊರತೆಯಿಂದ ಟ್ಯಾಂಕ್‌ನ ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಕಬ್ಬಿಣದ ಸರಳುಗಳು ಹೊರಗೆ ಕಾಣಿಸುವಷ್ಟು ರಚನೆ ದುರ್ಬಲಗೊಂಡಿತ್ತು.**

ತಾಂತ್ರಿಕ ಅಧಿಕಾರಿಗಳ ಪರಿಶೀಲನೆಯಲ್ಲಿ ಯಾವುದೇ ಸಂದರ್ಭದಲ್ಲಿ ಕುಸಿಯುವ ಸಾಧ್ಯತೆ ಇದೆ ಎಂದು ವರದಿ ಬಂದ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು. ಟ್ಯಾಂಕ್ ಸುತ್ತಮುತ್ತ ವಾಸಿಸುತ್ತಿದ್ದ 50ಕ್ಕೂ ಹೆಚ್ಚು ಕುಟುಂಬಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಸಂಬಂಧಿತ ಇಲಾಖೆಗಳ ಸಮನ್ವಯದಲ್ಲಿ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ಕಾರ್ಯಾಚರಣೆ ನಡೆಸಲಾಯಿತು. ತಜ್ಞರ ಮೇಲ್ವಿಚಾರಣೆಯಲ್ಲಿ ಯಾವುದೇ ಅನಾಹುತ ಸಂಭವಿಸದಂತೆ ಎಚ್ಚರಿಕೆಯಿಂದ ಟ್ಯಾಂಕ್ ತೆರವುಗೊಳಿಸಲಾಯಿತು. ಸಾರ್ವಜನಿಕರಿಗೆ ಅಪಾಯ ಉಂಟುಮಾಡುವ ಶಿಥಿಲಗೊಂಡ ಕಟ್ಟಡಗಳು, ಬಳಕೆಯಲ್ಲಿಲ್ಲದ ನೀರಿನ ಟ್ಯಾಂಕ್‌ಗಳು ಹಾಗೂ ಇತರ ಅಪಾಯಕಾರಿ ರಚನೆಗಳನ್ನು ಗುರುತಿಸಿ ತಾಂತ್ರಿಕ ಪರಿಶೀಲನೆ ನಡೆಸಲಾಗುವುದು.

ಅಗತ್ಯವಿರುವ ಕಡೆ ನಿಯಮಾನುಸಾರ ತೆರವುಗೊಳಿಸುವ ಕ್ರಮ ಕೈಗೊಳ್ಳಲಾಗುವುದು ಎಂದು ಪೂರ್ವ ವಿಭಾಗದ ಆಯುಕ್ತ ರಮೇಶ್ ತಿಳಿಸಿದರು. ಅಪಾಯಕಾರಿ ಕಟ್ಟಡಗಳು ಹಾಗೂ ಶಿಥಿಲಗೊಂಡ ಸಾರ್ವಜನಿಕ ಮೂಲಸೌಕರ್ಯಗಳ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವುದಿಲ್ಲ. ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟುಮಾಡುವ ಯಾವುದೇ ರಚನೆಯ ವಿರುದ್ಧ ಕಾನೂನುಬದ್ಧ ಹಾಗೂ ತಾಂತ್ರಿಕ ಕ್ರಮ ಮುಂದುವರಿಸಲಾಗುವುದು ಎಂದರು.ತಮ್ಮ ಸುತ್ತಮುತ್ತ ಶಿಥಿಲಗೊಂಡ ಕಟ್ಟಡಗಳು, ಹಳೆಯ ನೀರಿನ ಟ್ಯಾಂಕ್‌ಗಳು ಅಥವಾ ಅಪಾಯಕಾರಿ ಸಾರ್ವಜನಿಕ ರಚನೆಗಳು ಕಂಡುಬಂದಲ್ಲಿ ಪಾಲಿಕೆಯ ಗಮನಕ್ಕೆ ತರುವಂತೆ ರಮೇಶ್ ಸಾರ್ವಜನಿಕರಲ್ಲಿ ಮನವಿ ಮಾಡಿದರು.

## 'ವಚನಾಮೃತ'

ಬಿರುಕು ಬಿಟ್ಟ ಗೋಡೆಯೊಳಗೊಂದು
ಬಿಳಿಹೂ ನೆಡುವ
ಕಜ್ಜವೊಂದಾಗಬೇಕಿದೀಗ ಕಾಣಾ!.
ಒಡೆದಾಡಿದ ಬಿರುನುಡಿಯೊಂದ್ಮರೆತು
ಸಂಜೆಯೊಳ್ಗೊಂದು ಓಕುಳಿ ಚೆಲ್ಲು
ಸತ್ಯವಾಣಿ!!.



ವಾಣಿ ಭಂಡಾರಿ.

# ಖಾಸಗಿ ಬಸ್ ಪಲ್ಟಿ, 7 ಮಂದಿ ದುರ್ಮರಣ

ಅ.ಶ. ಸುದ್ದಿ ಶಿಮ್ಲಾ

**ಶಿಮ್ಲಾ: ಬೆಳಗ್ಗೆ 7.15 ಕ್ಕೆ ಚಂಬಾ ಜಿಲ್ಲೆಯಲ್ಲಿ ಖಾಸಗಿ ಬಸ್ ಪಲ್ಟಿಯಾಗಿ ಕೆಳ ರಸ್ತೆಗೆ ಉರುಳಿ ಏಳು ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಮತ್ತು 11 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಿರಿದಾದ ಮಾರ್ಗಗಳು ಮತ್ತು ಕಡಿದಾದ ಡ್ರಾಪ್-ಆಫ್‌ಗಳಿಗೆ ಹೆಸರುವಾಸಿಯಾದ ದೂರದ ಚುರಾ ಕಣಿವೆಯಲ್ಲಿನ 27-ಕಿಲೋಮೀಟರ್ ಪರ್ವತದ**




**ಮೋಸದ ಮಾರ್ಗವಾದ ಬೈರಾಗರ್-ತಿಸ್ಸಾ ರಸ್ತೆಯ ಚಲುಂಜ್ ಮೋರ್ ಬಳಿ ಬೈರಾಗರ್‌ನಿಂದ ಚಂಬಾಗೆ ಬಸ್ ತೆರಳುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.**

=ಇದು ಎತ್ತರದ ಸಾಚ್ ಪಾಸ್‌ಗೆ ಹೋಗುವ ದಾರಿಯಲ್ಲಿ ಪ್ರಮುಖ ವಿಸ್ತರಣೆಯಾಗಿ ಕಾರ್ಯನಿರ್ವಹಿಸುತ್ತದೆ. ಎಸ್‌ಪಿ ವಿಜಯ್ ಸಕ್ಲಾನಿ ಅವರು ಬಸ್‌ನಲ್ಲಿದ್ದ ಜನರ ನಿಖರ ಸಂಖ್ಯೆ ಇನ್ನೂ ತಿಳಿದಿಲ್ಲ ಎಂದು ಪಿಟಿಐಗೆ ತಿಳಿಸಿದ್ದಾರೆ. ಪ್ರಯಾಣಿಕರ ಕಿರುಚಾಟ ಕೇಳಿದ ಸ್ಥಳೀಯರು ಸಹಾಯಕ್ಕೆ ಧಾವಿಸಿ ಪೊಲೀಸರಿಗೆ ಮಾಹಿತಿ ನೀಡಿದರು. ಘಟನಾ ಸ್ಥಳದಲ್ಲಿ ಎನ್‌ಡಿಆರ್‌ಎಫ್, ಪೊಲೀಸ್, ಗೃಹರಕ್ಷಕ ದಳ, ಅಗ್ನಿಶಾಮಕ ಸೇವೆಗಳು ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಗಳನ್ನು ಒಳಗೊಂಡ ಶೋಧ ಮತ್ತು ರಕ್ಷಣಾ ತಂಡದೊಂದಿಗೆ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಗೊಂಡ 11 ಮಂದಿಯಲ್ಲಿ ಗಂಭೀರ ಗಾಯಗೊಂಡ ಆರು ಮಂದಿಯನ್ನು ಚಂಬಾದ ಪಂಡಿತ್ ಜವಾಹರಲಾಲ್ ನೆಹರು ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿದೆ.

# ಸಿಎಸ್‌ಆರ್ ನಿಧಿ ಮೇಲೆ ನಿಗಾ ವಹಿಸಲು ಐಎಎಸ್ ಅಧಿಕಾರಿ ನೇಮಕ; ಡಿಕೆಶಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕಾರ್ಪೋರೇಟ್ ಸಂಸ್ಥೆಗಳು, ಕೈಗಾರಿಕೆಗಳು ಒಳಗೊಂಡಂತೆ ಸಾಮಾಜಿಕ ಹೊಣೆಗಾರಿಕೆ ನಿಧಿ ಸಿಎಸ್‌ಆರ್ ನಿಧಿ ಅಡಿ ಬರುವ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನೀತಿ ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ. ಸಿಎಸ್‌ಆರ್ ಚಟುವಟಿಕೆಗಳ ಮೇಲೆ ನಿಗಾವಹಿಸಲು ಐಎಎಸ್ ಅಧಿಕಾರಿಯೊಬ್ಬರನ್ನು ನಿಯೋಜಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.**




ಬೆಂಗಳೂರು ಐಟಿ ಕಂಪೆನಿಗಳು ಮತ್ತು ಕೈಗಾರಿಕೆಗಳ ಸಂಘದಿಂದ ಆಯೋಜಿಸಲಾದ ಸಿಎಸ್‌ಆರ್ ವಿಷನ್ -2030 ಸಮಾವೇಶದಲ್ಲಿ ಮಾತನಾಡಿದ ಅವರು, ಸಿ.ಎಸ್.ಆರ್ ಚಟುವಟಿಕೆಯಲ್ಲಿ ಮೊದಲ ಹಂತದಲ್ಲಿ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದು, ನಂತರ ಆರೋಗ್ಯ ಸೇವೆಗೆ ಆದ್ಯತೆ ನೀಡಲಾಗುವುದು. ಕಂಪೆನಿಗಳು ಸಿಎಸ್‌ಆರ್ ಚಟುವಟಿಕೆಯಲ್ಲಿ ವೆಚ್ಚ ಮಾಡುವ ಹಣ, ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಸೂಕ್ತ ಕಣ್ಗಾವಲು ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದರು. ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಮೇಲ್ದರ್ಜೇಗೇರಿಸಲು ಕ್ರಮ ತೆಗೆದುಕೊಳ್ಳಬೇಕು.

ಬೆಂಗಳೂರು ಹೊರತುಪಡಿಸಿ ಜಿಲ್ಲಾ ಕೇಂದ್ರಗಳಲ್ಲೂ ಶಾಲೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳುವಂತಿಲ್ಲ. ಗ್ರಾಮ ಪಂಚಾಯತ್ ಹಂತದಲ್ಲಿ ಶಾಲಾಭಿವೃದ್ಧಿಗೆ ಗಮನಹರಿಸಬೇಕು. ಯಾವ ಗ್ರಾಮದ ಶಾಲೆಯನ್ನಾದರೂ ಅಭಿವೃದ್ಧಿಪಡಿಸಿದರೂ ಸರ್ಕಾರ ನಿರ್ಬಂಧ ವಿಧಿಸುವುದಿಲ್ಲ. ಯಾರಿಗೆ ಬೇಕಾದರೂ ಗುತ್ತಿಗೆ ನೀಡಿ. ಆದರೆ ಗ್ರಾಮ ಪಂಚಾಯತ್ ಹಂತದಲ್ಲಿ ಉತ್ತಮ ಚಿಕಿತ್ಸೆ ದೊರೆಯುವಂತಹ ವ್ಯವಸ್ಥೆ ಕಲ್ಪಿಸಬೇಕು. ಇದಕ್ಕಾಗಿ ಎಲ್ಲಾ ಜಿಲ್ಲೆಗಳಲ್ಲಿ ಅಧಿಕಾರಿಗಳು, ಸಿಎಸ್‌ಆರ್ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳು ಬಿಲ್ಡರ್ ಗಳನ್ನು ಒಳಗೊಂಡಂತೆ ಸಮಿತಿ ರಚಿಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಸಿ.ಎಸ್.ಆರ್ ವ್ಯಾಪ್ತಿಯಡಿ ಪ್ರಸ್ತುತ 3394 ಕೋಟಿ ರೂ ವೆಚ್ಚ ಮಾಡುತ್ತಿದ್ದು, ಇದು ಅತ್ಯಂತ ಕಡಿಮೆಯಾಗಿದೆ. ವಾರ್ಷಿಕ ಸುಮಾರು 10 ಸಾವಿರ ಕೋಟಿ ರೂ ವೆಚ್ಚ ಮಾಡಬೇಕಾಗಿದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಐಎಎಸ್ ಅಧಿಕಾರಿಯೊಬ್ಬರು ಈ ಬಗ್ಗೆ ಗಮನಹರಿಸಲಿದ್ದಾರೆ. ಸರ್ಕಾರ ನಿರ್ಮಾಣ ಚಟುವಟಿಕೆ ಮಾಡಿದರೆ ಶೇ 18 ರಷ್ಟು ಜಿ.ಎಸ್.ಟಿ ಪಾವತಿಸಬೇಕಾಗುತ್ತದೆ. ಹಾಗಾಗಿ ಗುಣಮಟ್ಟದ ನಿರ್ಮಾಣ ಕಾರ್ಯಗಳನ್ನು ನೀವೇ ನಿರ್ವಹಿಸಬೇಕು. ಜೊತೆಗೆ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳು ಸಹ ರಾಜ್ಯದಲ್ಲಿ ತಲಾ ಒಂದೊಂದು ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಂಡು ನಿರ್ವಹಣೆ ಮಾಡಬೇಕು.

ನನ್ನ ಮಗಳು ಸಹ ಮೂರು ಶಾಲೆಗಳನ್ನು ದತ್ತು ಪಡೆದಿದ್ದಾಳೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಗ್ರಾಮೀಣ ಬಾಗದಲ್ಲಿ ಹಲವು ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಬೆಂಗಳೂರು ನಗರದ ಬೆಳವಣಿಗೆಗೆ ಪಂಡಿತ್ ಜವಾಹರ್ ಲಾಲ್ ನೆಹರು ಸ್ವಾತಂತ್ರೋತ್ತರದಲ್ಲಿ ಉತ್ತಮ ಅಡಿಪಾಯ ಹಾಕಿದ್ದು, ಜಗತ್ತಿನ ಅತ್ಯುತ್ತಮ ಕಂಪೆನಿಗಳು ಇಲ್ಲಿವೆ. ಈ ನಗರದಲ್ಲಿ ನಾವು ಮಾತನಾಡುವ ಎಲ್ಲವೂ ಲಭ್ಯವಿದೆ. ಆದರೆ ಮುಂಬೈನಂತೆ ಬೆಂಗಳೂರು ನಗರ ದುಬಾರಿಯಲ್ಲ. ಒಂದೂವರೆ ಕೋಟಿಗೆ ನಗರದ ಆಸುಪಾಸಿನಲ್ಲಿ ಉತ್ತಮ ಮನೆಗಳನ್ನು ಖರೀದಿಸಬಹುದು.

ಮುಂಬರುವ ಬೆಂಗಳೂರು ಟೆಕ್ ಸಮ್ಮಿಟ್ ನಲ್ಲಿ ಈ ನಗರಕ್ಕೆ ಮತ್ತಷ್ಟು ಅಚ್ಚರಿಗಳು ದೊರೆಯಲಿವೆ ಎಂದರು. ಸಮ್ಮೇಳನದಲ್ಲಿ ಮಾಜಿ ರಾಜ್ಯಸಭಾ ಸದಸ್ಯ ಪ್ರೊ. ರಾಜೀವ್ ಗೌಡ, ವಾರ್ತಾ ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್, ಯಶವಂತ್ ವಿ ಗುರುಕರ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಿಇಒ ಸಂಜೀವ್ ಕುಮಾರ್ ಗುಪ್ತಾ, ಜಿಬಿಐಟಿಸಿಐಎ ಚೇರ್ ಮನ್ ಆದಿತ್ಯ ಪಿ.ಎಸ್, ಜಿಬಿಐಟಿಸಿಐಎ ಅಧ್ಯಕ್ಷ ಗಿರೀಶ್ ಎಚ್.ಕೆ., ಖಜಾಂಚಿ ಎಸ್. ಮಯೂರ್, ಸಿಎಸ್‌ಆರ್ ಮುಖ್ಯಸ್ಥ ವಾಸುದೇವ್ ಮತ್ತಿತರರು ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

# ಜಲಶೃಂಗಾರ ದೀಪಮಾಲೆ



ಹಚ್ಚು ನೀ ಸಿರಿ ಹಣತೆ ಇಂದು ಅಂಗಳದಲ್ಲಿ ಕಾರ್ತೀಕದಲಿ ಬೆಳಕು ಬಣ್ಣ ತಳೆವಂತೆ. ಯಾವ ದೀಪಾವಳಿಯ ನಲುಮೆ ಎದೆ ತುಂಬುವದೊ! ದೇವನೊಲುಮೆಯೊ ಬದುಕು! ಮುದ್ದುರಾಮ..

ಬಾಳಿನ ತಮ ಕಳೆಯುವುದೇ ಜ್ಞಾನಜ್ಯೋತಿ. ಅರಿವಿನ ಕಂಗಳ ತೆರೆದಾಗ ಬದುಕು ಧನ್ಯತೆಯ ಕಾಣುವುದು. ಕಾಣ್ಕೆ ಅವರವರ ನೋಟ. ಅಂತ ಶೂನ್ಯತ್ವ ಅಳಿದು ಮನದಲಿ ಪ್ರಕಾಶದ ಹೊಂಗಿರಣಗಳು ಪಸರಿಸಿದಾಗ ಬಾಳು ಬೆಳಗುತ್ತದೆ. ದೇವರ ದೀಪ ಆ ಕೋಣೆಗಷ್ಟೇ ಸೀಮಿತವಲ್ಲ ನಮ್ಮ ಶ್ರದ್ದೆಯ ದೀಪ ಬೆಳಗಿದಾಗ ನಂಬಿಕೆಯ ರೂಪವಾಗಿ ದೀಪ ಬೆಳಗುತ್ತದೆ. ಜಗವ ಬೆಳಗುವ ಚಂದ್ರ ಸೂರ್ಯರು ತಮ್ಮ ಬೆಳಕಿನಿಂದ ನೈರಾಶ್ಯ ಕಳೆಯುವರು. ಗಗನದ ತಾರೆಗಳು ಕಿರುಸೊಡರಿನಂತೆ ಚಂದ್ರನ ಹಿಂಬಾಲಿಸುವವು. ನಮ್ಮ ನಿಲುಮೆಯಲಿ ಕಾಂತಿ ಮೂಡಿದಾಗ ಅನುದಿನ ಕಾರ್ತಿಕದ ಬೆಳಕು ಕಾಣಿಸುತ್ತದೆ. ಮೇಣ ಕರಗಿದರೂ ದೀಪದ ಉರಿಯಲ್ಲಿ ವ್ಯತ್ಯಾಸವಿರುವುದಿಲ್ಲ. ಅದರ ಉದ್ದೇಶ ಬೆಳಗುವುದಾಗಿದೆ. ಭಾವ ಬೆಳಗಿದಾಗ ಸಂಯಮತೆಯೇ ಧ್ಯಾನದ ರೂಪ ಪಡೆದು ದಿಟದ ರೂಪದಲ್ಲಿ ಚೈತನ್ಯದ ಕಿರಣಗಳ ಚೆಲ್ಲುತ್ತದೆ. ನಮ್ಮ ಸುವಿವೇಕದಡಿಯಲ್ಲಿ ಸುಗುಣಗಳು ದ್ವಿಗುಣವಾದಾಗ ಬಾಳಿನ ಗಣಿತದಲ್ಲಿ ಉತ್ತಮ ಫಲಿತಾಂಶ ಕಾಣಬಹುದು. ಆ ದಿವ್ಯತೆಯೇ ನಿತ್ಯ ಶಾಶ್ವತ ನೈಜ ಪ್ರಭೆ ಆಗಿರುತ್ತದೆ. ಭಗವಂತನಿತ್ತ ಅರಿವು ನಮ್ಮನ್ನ ಸಂಪೂರ್ಣ ರನ್ನಾಗಿಸಿ ಬಾಳಿನಲ್ಲಿ ನಿಶ್ಚಲತೆಗೆ ತಲೆಬಾಗುವುದ ಕಲಿಸುತ್ತದೆ.

ಪ್ರತಿನಿತ್ಯ ಗಂಗೆ ಯಮುನೆಯರು ತಮ್ಮ ಒಡಲಲ್ಲಿ ದೀಪಗಳ ಮಾಲೆಗಳ ಧರಿಸಿ ಸಾಗುತ್ತಿರುತ್ತಾರೆ .ಅವರು ಉಟ್ಟ ಸೀರೆಯ ನೀರಿಗೆಗಳಲ್ಲಿ ಜೋಡಿಸಿಟ್ಟಂತೆ ಕಾಣುವ ಈ ಜಲ ಶೃಂಗಾರ ಅತಿ ಮನಮೋಹಕವಾಗಿರುತ್ತದೆ. ಸಣ್ಣ ದೀಪಗಳು ದೊನ್ನೆ ಗಳಲ್ಲಿ ಜೋಡಿಸಿದಾಗ ನದಿಯ ಅಲೆಗಳ ಮೇಲೆ ಚಲಿಸುತ್ತಿರುತ್ತವೆ ಮತ್ತು ಭಕ್ತಿ ದಡವ ಸೇರುತ್ತವೆ. ಈ ಪರಿಯ ಸೊಬಗು ಅನನ್ಯವಾದದ್ದು. ಭಕ್ತಿ ಭಾವದ ಶ್ರದ್ದೆ ಬೆಳಗಿ ತಮ್ಮ ಹೊಂಗಿರಣ ಗಳಿಂದ ನದಿಯ ನೀರಿನಲ್ಲಿ ಬೆಳಕ ಪ್ರತಿಫಲಿಸುತ್ತ ಚಲಿಸುವ ವಿಸ್ಮಯ ಕಣ್ತುಂಬಿಕೊಳ್ಳುವುದೇ ಒಂದು ರೋಮಾಂಚನ!!!
ದಡಗಳಲ್ಲಿ ನಿಂತ ಭಕ್ತರ ಕಂಗಳಲ್ಲಿ ಧನ್ಯತೆಯೇ ಬೆಳಕಾಗಿ ತಮ್ಮ ಬೇಡಿಕೆಗಳು ಫಲಿಸಲೆಂದು ಕೈ ಮುಗಿಯುತ್ತಿರುವ ದೃಶ್ಯ ಅಚ್ಚುಕತನ ಬಿಂಬಿಸುವಂಥದ್ದು. ಸಾಲು ದೀಪಗಳು ಜೋಡಿಯಾಗಿ ಅಚ್ಚ ಬೆಳದಿಂಗಳ ತಿಳಿ ನೀಲದಲಿ ದರ್ಶಿಸುತ್ತಾ ಸಂಜೆಯು ರಾತ್ರಿಯಾದ ಪಯಣ ನಮ್ಮ ಗಣನೆಗೆ ಬರುವುದೇ ಇಲ್ಲ... ಈ ದೀಪ ದೃಶ್ಯಮಾಲೆಯ ವಿಹಂಗಮ ನೋಟ ಮನದಲ್ಲಿ ಅಚ್ಚೊತ್ತುವಂತಹದು. ಮನದ ಕದವನ್ನು ದಿವ್ಯತೆಯಲ್ಲಿ ಸ್ಪರ್ಶಿಸಿ ಅವಿರ್ಭಾವಕ್ಕೆ ಸಾಕ್ಷಿಯಾದ ಈ ಪರತತ್ವ ದರ್ಶನ ಸಹಜತೆಯಲ್ಲಿ ಚಿರಂತನನ ಇರುವನ್ನು ಬಿಂಬಿಸುತ್ತದೆ. ಮನದ ಹರಕೆಗಳು ಈಡೇರಲಿ ಎಂದು ಸಾಲು ದೀಪಗಳ ಆರತಿಯನ್ನು ಕೈಯಲ್ಲಿ ಹಿಡಿದು ಜೋರಾಗಿ ಹಾಡುತ್ತ ಭಕ್ತಿ ಭಾವದಲಿ ಮಿಂದೇಳುವ ಭಕ್ತರ ಪಾಲಿನ ಗಂಗೆ ಬಾಳಿನ ತಮವ ಕಳೆದು ಪಾವನವಾಗಿಸಿ ಭಕ್ತಿಯ ಮಾರ್ಗದಲ್ಲಿ ಅಚ್ಚ ಬೆಳದಿಂಗಳಾಗಿ ವಿಹರಿಸುವಳು. ಲಕ್ಷಾಂತರ ಜನರ ಸಾಕ್ಷಾತ್ ದೈವವಾದ ಗಂಗೆಯು ತನ್ನ ಅಚ್ಚೋದದಲಿ ಎಲ್ಲರ ಮನದ ಕೊಳೆಯ ತೊಳೆಯುವ ಈ ದೃಶ್ಯ ರೋಮಾಂಚನ ವಾಗಿಸುವಂತಹದ್ದು. ಎಲ್ಲೆಲ್ಲೂ ಭಕ್ತಿಯ ಪರಾಕಾಷ್ಟೆಯನ್ನು ಪ್ರತಿಬಿಂಬಿಸುವ ದೃಶ್ಯಗಳು. ಈ ದಿವ್ಯಾನುಭವ ಸದಾ ಮನದಲ್ಲಿ ಸುಖದ ನೆಲೆಯನ್ನು ಸೃಷ್ಟಿಸುತ್ತದೆ. ದೀಪಗಳು ದೈದೀಪ್ಯ ಮಾನವಾಗಿ ಉರಿಯುತ್ತವೆ. ಮನದ ಕಾಳಿಕೆಯ ಕರಗಿಸಿ ಮುಕ್ಕಾಗಿಸಿ ಅಜ್ಞತ್ವ ಮತ್ತು ಅತೀತ ಜನುಮದ ಪಾಪಗಳನ್ನೆಲ್ಲ ತೊಳೆದು ಅತಿಮುಕ್ತತೆಯಿಂದ ಧು ಮ್ಮುಕ್ಕುವ ಗಂಗೆಯ ಪಾತ್ರ ಅತ್ಯಾಯತವಾದದ್ದು, ಅತಿಧ ವಳವಾದದ್ದು. ನಮ್ಮ ಮನದಲ್ಲಿಯ ಅದೃಶ್ಯ ರೂಪಕ್ಕೆ ಅತಿವ್ಯಕ್ತತೆಯ ನೀಡುವ ಈ ಜಲ ಶೃಂಗಾರ ನಮ್ಮಲ್ಲಿ ಭಾವಗಂಗೋತ್ರಿಯ ಹರಿಸಿ ಎಂದೂ? ನಂದದ ನಂದಾದೀಪದಂತೆ ಪ್ರಜ್ವಲಿ ಸುತ್ತಿರುತ್ತದೆ...



ಆರತಿ ಎನ್ ರಾವ್

## ಕಡಲಿನಾಳದ ನದಿ

ಹೀಗೆ ನಿನ್ನ ಮುಂದೆ
ಒಳಗಿನದೆಲ್ಲ ಸುರಿದು
ಖಾಲಿಯಾಗಿ ನಿಂತುದು
ಅದೆಷ್ಟನೆಯ ಸಲವೋ
ಲೆಕ್ಕವಿಟ್ಟಿರಬಹುದು ನೀನು.
ಮತ್ತೆ ಮತ್ತೆ ನನ್ನ ತುಂಬುವವನು
ಕರುಣಾಳು ನೀನೇ ತಾನೇ?

ಅಬ್ಬರದ ಶರಧಿಯಲಿ
ಅಲೆವ ಮೀನು ನಾನು
ದಿಕ್ಕು ತಪ್ಪುತ್ತ ಬೆಚ್ಚಿ ಸ್ತಬ್ಧವಾಗುತ್ತ
ಅಲೆಗಳು ಕೊಂಡೊಯ್ದಾಗ ದಡಕ್ಕೆ
ಗುರುತ್ವ ಸೆಳೆದರೆ ಒಳಕ್ಕೆ
ಸಾಕು ಬೇಕುಗಳ ಏತಾಪಾತಾ
ಈಜುವುದೆಂಬುದೂ ಈಗ
ಜಾಡಿಗೆ ಬಿದ್ದ ಉಸಿರು.

ನೀರೆಣ್ಣೆಗೆ ಬೆಂಕಿ ಹೊತ್ತಿ
ಶರಧಿಯ ಬಾಹುಗಳ
ಚಾಚುತ್ತವೆ ಕೆನ್ನಾಲಿಗೆ
ಅತ್ತಲಿಂದ ನುಣುಚಿಕೊಂಡು
ಇತ್ತ ತಿರುಗಿದರೆ
ಉಸಿರು ಕಟ್ಟುವ
ಮತ್ತೆ ಬಿಡುವ ಪ್ರಾಣಾಯಾಮ.

ತುಂಬುವವರ ಸುರಿಯುವವರ
ಯಾರ‍್ಯಾರದೋ ಕೈಚಳಕ!
ಒಳಗಿನ ಹೊರಗಿನ
ಯಾವ್ಯಾವುದೋ ಅಸಂಬದ್ಧ ಲೆಕ್ಕ.

2
ಮೊರೆವ ಕಡಲಿನಾಳದಲೆಲ್ಲೋ
ತಣ್ಣಗೆ ಹರಿವ ನದಿಯಿದೆಯಂತೆ
ಅಲ್ಲಿ ಸಿಹಿ ನೀರಿನ
ನುಣುಪು ಮರಳಿನೆದೆ
ಮೇಲೆ ನೀರು
ಸದ್ದಿಲ್ಲದೇ ಮಲಗುತ್ತದಂತೆ
ಒಂದಕ್ಕೆ ಇನ್ನೊಂದು
ಮೌನದಲಿ ಲಾಲಿ
ಹಾಡುತ್ತವಂತೆ
ಕಾಣದಂತೆ ಎತ್ತಲೋ ಸಾಗುತ್ತವಂತೆ

ಹೊರಗೆಂಬುದಿಲ್ಲ
ಒಳಗೆಂಬುದಿಲ್ಲ.

ತೋರು ನನಗೆ ಜೀಯಾ
ಆ ಕಡಲಿನಾಳದ
ನದಿಯ ತೋರು ನನಗೆ.

## ನಾ ಕಂಡ ದೇಶ ಸಿಂಗಾಪೂರ...

ನಾನು ದಿನಾಂಕ 2-8-2026 ರಿಂದ 8-8-2026 ರವರೆಗೆ ಒಂದು ವಾರ ಕಾಲ ಸಿಂಗಾಪುರ ದೇಶದ ಪ್ರವಾಸಕ್ಕೆ ಹೋಗಿ ಬಂದಿದ್ದೇನೆ. ನಾನು ಸುಮಾರು 2-3 ದೇಶ ತಿರುಗಾಡಿದ್ದೆನೆ ಅದ್ರೆ ಯಾಕೋ ಸಿಂಗಾಪೂರ ಬಹಳ ಹತ್ತಿರವಾಯ್ತು ಅದಕ್ಕೆ ಎರಡು ಸಾಲು ನಿಮ್ಮೊಂದಿಗೆ.....

ನಿಜಕ್ಕೂ ಅದ್ಭುತ ಮೂಲಸೌಕರ್ಯ, ಅದ್ಭುತ ವಿನ್ಯಾಸದ ಐಶಾರಾಮಿ ಕಟ್ಟಡಗಳು ,ವರ್ಣರಂಜಿತ ಉದ್ಯಾನಗಳು ಸ್ವಚ್ಚ ಸುಂದರ ಕಡಲ ಕಿನಾರೆಗಳು ಅತ್ಯುತ್ತಮ ಗುಣಮಟ್ಟದ ರಸ್ತೆಗಳು ಮಾನವ ನಿರ್ಮಿತ ಸಂಪನ್ಮೂಲಗಳೆಂದರೆ ಅತೀಶೋಕ್ತಿಯಲ್ಲ ಕೇವಲ 744 square ಕಿಲೋಮೀಟ-ರ ಅಂದ್ರೆ ನಮ್ಮ ಬೆಂಗಳೂರಿನಷ್ಟೆ ಇರುವ ಅತಿ ಪುಟ್ಟ ರಾಷ್ಟ್ರ ಪ್ರವಾಸೋದ್ಯಮ,ಹಣಕಾಸು,ತಾಂತ್ರಿಕ ವಲಯದಲ್ಲಿ ಉತ್ತುಂಗದಲ್ಲಿರುವ ದೇಶ. ಭಾರತಕ್ಕಿಂತ ನಂತರ ಅಂದರೆ 1965 ಆಗಸ್ಟ್ 9ರಂದು ಸಾರ್ವಭೌಮ ಸ್ವತಂತ್ರ ರಾಷ್ಟ್ರವಾಗಿ ಹೊರಹೊಮ್ಮಿ ಪ್ರಗತಿಶೀಲ ರಾಷ್ಟ್ರವಾದ ಪರಿ ನಿಜಕ್ಕೂ ಅದ್ಭುತ... ಯಾಕೆ ಈ ಬೆಳವಣಿಗೆ ದೂರಗಾಮಿ & ದೂರದೃಷ್ಟಿಯುಳ್ಳ ಭ್ರಷ್ಟಾಚಾರ ರಹಿತ ಸ್ವಚ್ಚ ಆಡಳಿತ ಅಷ್ಟೆ ಅಚ್ಚುಕಟ್ಟಾಗಿ ಕಾನೂನು ಪಾಲಿಸುವ ಪ್ರಜೆಗಳು ಆ ದೇಶವನ್ನು ಆ ಮಟ್ಟಕ್ಕೆ ಒಯ್ದಿವೆ... ಇಲ್ಲಿನ ಮುಖ್ಯ ಆಕರ್ಷಣೆಗಳು

1) ಚಾಂಗಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ.... ಇದು ಒಂದಿ ಸಾರಿಗೆ ನಿಲ್ದಾಣವಾಗದೆ ದೇಶದ ಆಕರ್ಷಕ ವಿನ್ಯಾಸದ ಎತ್ತರದ ಜಲಪಾತ, ಪತಂಗ ಉದ್ಯಾನ,ಆ-ಕಾಶ ರೈಲು ಇದರ ಮುಖ್ಯ ಆಕರ್ಷಣೆಗಳು...

2) ಸೆಂಟೋಸಾ ಗಾರ್ಡನ.. ಇದು ಚಾಂಗಿ ಏರ್ ಪೋರ್ಟ್ ನಿಂದ 25 ಏಂ ದೂರದಲ್ಲಿದೆ ಇದೊಂದು ಚಿಕ್ಕ ನಡುಗಡ್ಡೆ ಯಾಗಿದ್ದು ಇಲ್ಲಿ ಕೆಬಲ್ ಕಾರ ಪ್ರಯಾಣ ವಿಶೆಷ ಮತ್ತು ಸಂಜೆ ಮ್ಯೂಜಿಕಲ್ ಫೌಂಟೆನ್ 3ಆ ಆಯನಿಮೇಷನ್ ಶೊ ಸುಂದರವಾಗಿರೊತ್ತೆ....

3) ಚೀನಾ ಟೌನ್... ಹೆಸರೆ ಹೇಳುವಂತೆ ಬಹುತೇಕ ಬೌದ್ದ ಧರ್ಮದ ಅನುಯಾಯಿ ಗಳು ಇರುವ ಪುರಾತನ ಮಾರುಕಟ್ಟೆ ಪ್ರದೇಶ ಇಲ್ಲಿ ಬೌದ್ದ ದೇವಾಲಯವಿದ್ದು ಅಲ್ಲಿ ಬುದ್ಧನ ಹಲ್ಲಿನ ಅವಶೇಷಗಳನ್ನು ಕಾಣಬಹುದು....

4) ಯುನಿವರ್ಸಲ್ ಸ್ಟುಡಿಯೋ... ಇದು ಜಗತ್ತಿನ ಐದನೇಯ ದೊಡ್ಡ ಸ್ಟುಡಿಯೋ ಇದು ಸುಮಾರು 25 ಹೆಕ್ಟೇರ ಪ್ರದೇಶದಲ್ಲಿ ಹರಡಿದೆ ಇಲ್ಲಿ ಚಲನಚಿತ್ರ ನಿರ್ಮಾಣ,ವಾಟ-ರ ಪಾರ್ಕ ಮತ್ತಿತರ ಮನರಂಜನಾ ತಾಣವಾಗಿದೆ

5) ಗಾರ್ಡನ ಬೈ ಬೇ..... ಇದು ಸಿಂಗಾಪುರದ ಹೃದಯ ಭಾಗದಲ್ಲಿರುವ ಆಕರ್ಷಕ ಉದ್ಯಾನವನ







ಇದು ಸುಮಾರು 5 ಎಕರೆಯಲ್ಲಿ ಹರಡಿರುವ ಆರ್ಕಿಡ್,ಬಟಾನಿಕ್,ಮುಗಿಲೆತ್ತರದ ಕೃತಕ ಜಲಪಾಗಳು ,ಡೈನೋಸಾರ್ ಪಾರ್ಕ ಈ ಗಾರ್ಡನ ವೈಶಿಷ್ಟ್ಯ....

6) ಸಿಂಗಾಪೂರ ಮರ್ಲಿನ್ ಪಾರ್ಕ... ಸಿಂಗಾಪೂರಕ್ಕೆ ಈ ಹೆಸರು ಬರಲು ಕಾರಣ ಸಿಂಹದ ಊರು ಅಂದರೆ ಸಿಂಹದಂತೆ ಧೈರ್ಯ ,ಶಕ್ತಿ ಮತ್ತು ರಾಷ್ಟ್ರೀಯತೆ ಪ್ರತೀಕವಾಗಿ ಸಮುದ್ರ ದಡದಲ್ಲಿ ಸಿಂಹದ ಬಾಯಿಂದ ನೀರು ಬರುವ ಪ್ರತಿಮೆಯನ್ನು ಸ್ಥಾಪಿಸಲಾಗಿದೆ ಇದು ಸಿಂಗಾಪೂರದ ರಾಷ್ಟ್ರ ಲಾಂಛನ ಕೂಡ ಹೌದು.... ಸಿಂಗಾಪೂರವನ್ನ ಕೇವಲ ಒಂದು ಮನರಂಜನಾ ತಾಣವಾಗಿ ನೋಡಿದರೆ ನಮ್ಮ ಪ್ರವಾಸ ಅಪೂರ್ಣ ಸಾರ್ವಭೌಮತೆ ,ಸಾಂಘಿಕ ಶಕ್ತಿ,ಶಿಸ್ತು ಸಮಯಪ-ರಿಪಾಲನೆ ಕಾನೂನು ಬದ್ಧತೆಗಳನ್ನ ಗಮನಿಸಿದರೆ ಮಾತ್ರ ನಮ್ಮ ಪ್ರವಾಸ ಸಂಪೂರ್ಣ.... ಅಲ್ಲಿ ವಸತಿಗಾಗಿ ಅನೇಕ ಗುಣಮಟ್ಟದ ಹೊಟೆಲಗಳು ಸದಾ ಕಾಲ ತೆರೆದಿರುತ್ತವೆ ಭಾರತೀಯ ಮಾರುಕಟ್ಟೆಗೆ ಹೋಲಿಸಿದರೆ ಅಲ್ಲಿನ ಬಹುತೇಕ ಸಾಮಗ್ರಿಗಳು ದುಬಾರಿಯಾಗುತ್ತವೆ ಆದ್ರೆ ಸೌಲಭ್ಯಗಳು ಅಚ್ಚುಕಟ್ಟು.. “ಕಾಣುವ ಕಣ್ಣಿಗೆ ರಸಾನುಭವ ಶಕ್ತಿಯಿದ್ದರೆ ಎಲ್ಲವೂ ಮನಮೋಹಕ” ಎಂಬಂತೆ ಸಿಂಗಾಪೂರವನ್ನ ಕಣ್ತುಂಬಿಕೊಳ್ಳಲು ಜೂನ್ ನಿಂದ ಡಿಸೆಂಬರ ಸೂಕ್ತ ಕಾಲ ಸಿಂಗಾಪೂರಕ್ಕೆ ಹೋಗಲು ಹಲವಾರು ಟ್ರಾವೆಲ್

ಸಿದ್ಧಲಿಂಗಯ್ಯ ಹಿರೇಮಠ ಹವ್ಯಾಸಿ ಲೇಖಕರು
ಯುವ ಉದ್ಯಮಿಗಳು ಕೊಪ್ಪಳ-583231

## ಲಾಲ್‌ಬಾಗ್ ಹೂವಿನ ಮೇಳ: ಗ್ಲಾಸ್ ಹೌಸ್‌ನಲ್ಲಿರಳಿದ ಸಾಂಸ್ಕೃತಿಕ ವೈಭವ

**ಬೆಂಗಳೂರಿನ ಹೃದಯಭಾಗದಲ್ಲಿರುವ ಐತಿಹಾಸಿಕ ಲಾಲ್‌ಬಾಗ್ ಸಸ್ಯಶಾಸ್ತ್ರೀಯ ಉದ್ಯಾನವನವು ಪ್ರತಿಯೊಬ್ಬ ಕನ್ನಡಿಗನ ಹೆಮ್ಮೆ. ಪ್ರತಿವರ್ಷ ಗಣರಾಜ್ಯೋತ್ಸವ (ಜನವರಿ) ಹಾಗೂ ಸ್ವಾತಂತ್ರ್ಯೋತ್ಸವದ (ಆಗಸ್ಟ್) ಶುಭ ಸಂದರ್ಭದಲ್ಲಿ ಇಲ್ಲಿ ನಡೆಯುವ 'ಲಾಲ್‌ಬಾಗ್ ಹೂವಿನ ಮೇಳ' ಇಡೀ ನಗರಕ್ಕೆ ಹಬ್ಬದ ಕಳೆಯನ್ನು ತರುತ್ತದೆ.**

ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆ ಮತ್ತು ಮೈಸೂರು ತೋಟಗಾರಿಕೆ ಸಂಘ ಜಂಟಿಯಾಗಿ ಆಯೋಜಿಸುವ ಈ ಸಸ್ಯೋತ್ಸವವು ಪ್ರವಾಸಿಗರನ್ನು ತನ್ಮಯಗೊಳಿಸುತ್ತದೆ. ಗ್ಲಾಸ್ ಹೌಸ್‌ನಲ್ಲಿ ಕಲಾತ್ಮಕ ವೈಭವ ಲಾಲ್‌ಬಾಗ್‌ನ ಪ್ರಮುಖ ಆಕರ್ಷಣೆಯಾದ ಬೃಹತ್ ಗ್ಲಾಸ್ ಹೌಸ್ (Glass House) ಒಳಗೆ ಕಾಲಿಡುತ್ತಿದ್ದಂತೆ ವಿವಿಧ ವರ್ಣಗಳ, ವಿದೇಶಿ ಹಾಗೂ ದೇಶಿ ಅಪರೂಪದ ಹೂವುಗಳ ಸೌಂದರ್ಯ ಕಣ್ಣಿಗೆ ಕಟ್ಟುತ್ತದೆ. ಪ್ರತಿಯೊಂದು ಹೂವಿನ ಮೇಳಕ್ಕೂ ಒಂದು ನಿರ್ದಿಷ್ಟ ವಿಶೇಷ ಥೀಮ್ (Theme) ಅನ್ನು ಆಯ್ಕೆ ಮಾಡಲಾಗುತ್ತದೆ. ಕರ್ನಾಟಕದ ಇತಿಹಾಸ, ಸಾಂಸ್ಕೃತಿಕ ಸ್ಮಾರಕಗಳು ಹಾಗೂ ಮಹನೀಯರ ಸ್ಮರಣಾರ್ಥವಾಗಿ ಬೃಹತ್ ಹೂವಿನ ಕಲಾಕೃತಿಗಳನ್ನು ಇಲ್ಲಿ ಕಲಾತ್ಮಕವಾಗಿ ನಿರ್ಮಿಸಲಾಗುತ್ತದೆ.

ಈ ಬಾರಿಯ ಪ್ರದರ್ಶನದಲ್ಲಿ ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಅತ್ಯಂತ ಭವ್ಯವಾಗಿ ಮರುಸೃಷ್ಟಿಸಲಾಗಿದೆ: ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಹಾಗೂ ಚಾವುಂಡರಾಯ: ಗಂಗರ ಆಳ್ವಿಕೆಯ ಇತಿಹಾಸ, ವಿದ್ಯಾಧರ ಚಾವುಂಡರಾಯ ಮತ್ತು ಶ್ರವಣಬೆಳಗೊಳದ ವಿಂಧ್ಯಗಿರಿಯ 58.8 ಅಡಿ ಎತ್ತರದ ಬಾಹುಬಲಿ ವಿಗ್ರಹದ ಇತಿಹಾಸವನ್ನು ಬಿಂಬಿಸುವ ಮಾಹಿತಿ ಫಲಕಗಳು ಹಾಗೂ ಕಲಾಕೃತಿಗಳು ಗಮನ ಸೆಳೆಯುತ್ತವೆ. ಐತಿಹಾಸಿಕ ದೇವಾಲಯಗಳ ಸೃಷ್ಟಿ: ಹೊಯ್ಸಳ ಹಾಗೂ ವಿಜಯನಗರ ಶೈಲಿಯ ಸುಂದರ ಗೋಪುರಗಳು, ಪ್ರಾಚೀನ ದೇವಾಲಯಗಳ ಮಾದರಿಗಳನ್ನು ಸಾವಿರಾರು ವರ್ಣರಂಜಿತ ಹೂವುಗಳಿಂದ ಸಜ್ಜುಗೊಳಿಸಲಾಗಿದೆ.



**ಐತಿಹಾಸಿಕ ಶಾಸನಗಳು:** ಮಂಡ್ಯದ ಅತಕೂರು ಶಾಸನದ 'ಕಾಳಿ ನಾಯಿಯ ಸ್ಮಾರಕ ವೀರಗಲ್ಲು' (ಕ್ರಿ.ಶ. 949–950) ಸೇರಿದಂತೆ ನಮ್ಮ ನಾಡಿನ ಪರಂಪರೆಯನ್ನು ಸಾರುವ ಚಿತ್ರಣಗಳನ್ನು ತೋಟಗಾರಿಕೆ ವಿನ್ಯಾಸದೊಂದಿಗೆ ಜೋಡಿಸಲಾಗಿದೆ. ಆನೆ ಹಾಗೂ ಅಲಂಕಾರಿಕ ಕಲಾಕೃತಿಗಳು: ರಾಜಶಾಯಿ ವೈಭವವನ್ನು ನೆನಪಿಸುವ ಅಲಂಕೃತ ಆನೆಯ ಬೃಹತ್ ವಿಗ್ರಹಗಳು ಮತ್ತು ದ್ವಾರಗಳು ಗ್ಲಾಸ್ ಹೌಸ್‌ಗೆ ರಾಜಕೀಯ ಕಳೆಯನ್ನು ನೀಡಿವೆ. ಹೂವುಗಳ ರಂಗೋಲಿ ಮತ್ತು ಗಾರ್ಡನ್ ಆಕರ್ಷಣೆಗಳು ಗ್ಲಾಸ್ ಹೌಸ್‌ನ ಒಳಗಷ್ಟೇ ಅಲ್ಲದೆ, ಹೊರಾಂಗಣದಲ್ಲೂ ಸಾಲು ಸಾಲಾಗಿ ಜೋಡಿಸಲಾದ ಸುಂದರ ಹೂವಿನ ಕಮಾನುಗಳು, ಹೂವುಗಳಿಂದ ಮಾಡಿದ ಬೃಹತ್ ಗೋಪುರಗಳು ಮತ್ತು ನೆಲದ ಮೇಲೆ ಬಿಡಿಸಿದಂತೆ ಕಾಣುವ ವಿವಿಧ ಬಣ್ಣದ 'ಹೂವಿನ ರಂಗೋಲಿ'ಗಳು ವೀಕ್ಷಕರನ್ನು ಮನಸೋಲಿಸುತ್ತವೆ.

ಅಷ್ಟೇ ಅಲ್ಲದೆ, ಪ್ರದರ್ಶನದ ಆವರಣದಲ್ಲಿ ಮಾಧ್ಯಮ ಸಂವಾದಗಳು, ಕಾರ್ಯಕ್ರಮಗಳು ಹಾಗೂ 'ಬಿಗ್ ಬಾಸ್' ನಂತಹ ಜನಪ್ರಿಯ ಮನರಂಜನಾ ಪ್ರಚಾರ ಮಳಿಗೆಗಳು ಸಾರ್ವಜನಿಕರ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ. ಪ್ರಕೃತಿ ಪ್ರೇಮಿಗಳಿಗೆ ಸ್ವರ್ಗ ವಿವಿಧ ನಮೂನೆಯ ಬೋನ್ಸಾಯ್ ಗಿಡಗಳು, ಗೃಹ ಅಲಂಕಾರಿಕ ಸಸ್ಯಗಳು, ತೋಟಗಾ-ರಿಕೆ ಉಪಕರಣಗಳು ಹಾಗೂ ಬೀಜ-ಗೊಬ್ಬರಗಳ ಮಾರಾಟ ಮಳಿಗೆಗಳು ಇಲ್ಲಿ ಲಭ್ಯವಿರುತ್ತವೆ.

ಹಸಿರು ಪ್ರೇಮಿಗಳು ತಮ್ಮ ಮನೆಗೆ ಬೇಕಾದ ಅಪರೂಪದ ಗಿಡಗಳನ್ನು ಖರೀದಿಸಲು ಇದೊಂದು ಉತ್ತಮ ವೇದಿಕೆ. ?ಒಟ್ಟಾರೆಯಾಗಿ, ಲಾಲ್‌ಬಾಗ್ ಹೂವಿನ ಮೇಳವು ಕೇವಲ ಹೂವುಗಳ ಪ್ರದರ್ಶನವಲ್ಲ; ಅದು ನಮ್ಮ ಸಂಸ್ಕೃತಿ, ಇತಿಹಾಸ ಮತ್ತು ನಿಸರ್ಗ ಸೌಂದರ್ಯಗಳ ಸಮ್ಮಿಲನ. ಪ್ರಕೃತಿಯ ಮಡಿಲಲ್ಲಿ ಒಂದಷ್ಟು ಸಮಯ ಕಳೆದು, ಕೆಮೆರಾ ಕಣ್ಣಲ್ಲಿ ನೆನಪುಗಳನ್ನು ಬಂಧಿಸಲು ಬಯಸುವ ಪ್ರತಿಯೊಬ್ಬರಿಗೂ ಈ



ಮೇಳವು ಮರೆಯಲಾಗದ ಅನುಭವ ನೀಡುತ್ತದೆ.

# ಶಿಡ್ಲಘಟ್ಟದಲ್ಲಿ ಇಂದು ಕಾಂಗ್ರೆಸ್ 'ಸಂಘಟನಾ ಸೃಜನ್ ಅಭಿಯಾನ'

## ಕೆಪಿಸಿಸಿ ಕೋ-ಆರ್ಡಿನೇಟರ್, ಕಾಂಗ್ರೆಸ್ ಅಭ್ಯರ್ಥಿ ರಾಜೀವ್ ಗೌಡ ಮಾಹಿತಿ.

ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ:** ಕಾಂಗ್ರೆಸ್ ಪಕ್ಷದ ಸಂಘಟನಾತ್ಮಕ ರಚನೆಯನ್ನು ತಳಮಟ್ಟದಿಂದ ಮತ್ತಷ್ಟು ಬಲಪಡಿಸುವ, ಯುವಶಕ್ತಿ ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸುವ ದೂರದೃಷ್ಟಿಯ ಹೆಜ್ಜೆಯಾಗಿ ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ರಾಹುಲ್ ಗಾಂಧಿಯವರ ಕನಸಿನ ಯೋಜನೆ 'ಸಂಘಟನಾ ಸೃಜನ್ ಅಭಿಯಾನ'ದ ಪ್ರಯುಕ್ತ ಶಿಡ್ಲಘಟ್ಟದಲ್ಲಿ ಇಂದು (ಆಗಸ್ಟ್ 9, 2026) ಚಾಲನೆ ನೀಡಲಾಗುತ್ತಿದೆ ಎಐಸಿಸಿ ಮತ್ತು ಕೆಪಿಸಿಸಿ ವೀಕ್ಷಕರಾದ ಶ್ರೀ ಸುದರ್ಶನ್ ಅವರು ಆಗಮಿಸಲಿದ್ದಾರೆ" ಎಂದು ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಜೀವ್ ಗೌಡ ಅವರು ತಿಳಿಸಿದ್ದಾರೆ.

ಈ ಕುರಿತು ವೀಡಿಯೋ ಸಂದೇಶದ ಮೂಲಕ ಮಾಹಿತಿ ನೀಡಿರುವ ಅವರು, "ಈ ಮಹತ್ವದ ಅಭಿಯಾನದ ಪ್ರಯುಕ್ತ ನಗರದ ಕಾಂಗ್ರೆಸ್ ಭವನದಲ್ಲಿ 09 ಆಗಸ್ಟ್ 2026 (ಭಾನುವಾರ) ಸಮಯ: ಬೆಳಿಗ್ಗೆ 10:00 ಗಂಟೆಗೆ ಏರ್ಪಡಿಸಲಾಗಿದೆ. ಸಭೆಯ ಮಹತ್ವವನ್ನು ವಿವರಿಸಿದ ರಾಜೀವ್ ಗೌಡ ಅವರು, "ಚಿಕ್ಕಬಳ್ಳಾಪುರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆ ಆರಂಭಗೊಂಡಿದೆ. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಡೈರಿ ಆಡಳಿತ ಮಂಡಳಿಯ ಸದಸ್ಯರು,



ಅಧ್ಯಕ್ಷರು ಮತ್ತು ಯುವ ಕಾರ್ಯಕರ್ತರೇ ಕಾಂಗ್ರೆಸ್ ಪಕ್ಷದ ನೈಜ ಶಕ್ತಿಯಾಗಿದ್ದಾರೆ. ನಿಮ್ಮ ಸಲಹೆ ಮತ್ತು ಅಭಿಪ್ರಾಯಗಳ ಆಧಾರದ ಮೇಲೆಯೇ ಬಹುಮತದ ಮೂಲಕ ನೂತನ ಜಿಲ್ಲಾ ಅಧ್ಯಕ್ಷರ ಆಯ್ಕೆ ನಡೆಯಲಿದೆ. ನಾಯಕತ್ವ ರೂಪಿಸಲು ಕಾರ್ಯಕರ್ತರಿಗೆ ಇದೊಂದು ಅತ್ಯುತ್ತಮ ಅವಕಾಶವಾಗಿದ್ದು, ಪ್ರತಿಯೊಬ್ಬರೂ ಮುಕ್ತವಾಗಿ ತಮ್ಮ ಸಲಹೆಗಳನ್ನು ನೀಡಬಹುದು" ಎಂದರು.

ಬೂತ್ ಮಟ್ಟದಿಂದ ಹಿಡಿದು ಬ್ಲಾಕ್ ಮಟ್ಟದವರೆಗೆ ಪಕ್ಷವನ್ನು ಪುನಶ್ಚೇತನಗೊಳಿಸುವುದು, ಕಾರ್ಯಕರ್ತರನ್ನು ನೇರವಾಗಿ ನಿರ್ಧಾರಗಳಲ್ಲಿ ಭಾಗಿ ಮಾಡುವುದು ಮತ್ತು ಯುವ ನಾಯಕತ್ವವನ್ನು ಬೆಳೆಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ. "ನಮ್ಮ ಸಂಘಟನೆಯೇ ನಮ್ಮ ಶಕ್ತಿ, ನಮ್ಮ ಕಾರ್ಯಕರ್ತರೇ ನಮ್ಮ ಬಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರತಿಯೊಬ್ಬ ಕಾರ್ಯಕರ್ತನ ಪಾತ್ರವೂ ಅನನ್ಯ. ಆದ್ದರಿಂದ ಶಿಡ್ಲಘಟ್ಟ ಕ್ಷೇತ್ರದ ಎಲ್ಲಾ ಹಿರಿಯ-ಕಿರಿಯ ನಾಯಕರು, ವಿವಿಧ ಘಟಕಗಳ ಪದಾಧಿಕಾರಿಗಳು, ಬೂತ್ ಮಟ್ಟದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸಭೆಯನ್ನು ಯಶಸ್ವಿಗೊಳಿಸಬೇಕು" ಎಂದು ರಾಜೀವ್ ಗೌಡ ಅವರು ಮನವಿ ಮಾಡಿದ್ದಾರೆ.

## ಅಕ್ರಮ ಬಾಂಗ್ಲಾ ವಲಸಿಗರ ವಿರುದ್ಧ ಕಟ್ಟುನಿಟ್ಟಿನ ಕ್ರಮ: ಪ್ರಿಯಾಂಕ್ ಖರ್ಗೆಗೆ ಕರವೇ ಬೆಂಬಲ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕರ್ನಾಟಕದಲ್ಲಿ ಅಕ್ರಮ ವಲಸೆಯ ವಿರುದ್ಧ ರಾಜ್ಯ ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮವನ್ನು ಸ್ವಾಗತಿಸಿರುವ ಕರ್ನಾಟಕ ರಕ್ಷಣಾ ವೇದಿಕೆ, ಇದುವರೆಗೆ ಕೇವಲ ಬಾಂಗ್ಲಾ ವಲಸಿಗರ ಕುರಿತು ಮಾತುಗಳೇ ಹೆಚ್ಚಾಗಿದ್ದವು. ಗೃಹಸಚಿವರು ಕಾರ್ಯಾಚರಣೆಗೆ ಇಳಿದಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ಹೇಳಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ, ಕರ್ನಾಟಕ ಯಾವುದೇ ಅಂತರರಾಷ್ಟ್ರೀಯ ಗಡಿಯನ್ನು ಹೊಂದಿಲ್ಲ.**



ಹೀಗಿದ್ದರೂ ವಿದೇಶಗಳಿಂದ ಬಂದ ಶಂಕಿತ ಅಕ್ರಮ ವಲಸಿಗರು ರಾಜ್ಯದಲ್ಲಿ ಪತ್ತೆಯಾಗುತ್ತಿರುವುದು ಗಂಭೀರ ವಿಚಾರ. ಅವರು ಯಾವ ಮಾರ್ಗದ ಮೂಲಕ ಕರ್ನಾಟಕ ಪ್ರವೇಶಿಸುತ್ತಿದ್ದಾರೆ, ಅವರಿಗೆ ಯಾರು ಆಶ್ರಯ, ಉದ್ಯೋಗ ಅಥವಾ ನಕಲಿ ದಾಖಲೆಗಳನ್ನು ಒದಗಿಸುತ್ತಿದ್ದಾರೆ ಎಂಬುದರ ಸಮಗ್ರ ತನಿಖೆ ನಡೆಯಬೇಕು. ಅಕ್ರಮ ವಲಸೆಯ ಹಿಂದೆ ಇರುವ ಜಾಲವನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳುವುದು ಅತ್ಯಂತ ಅಗತ್ಯ ಎಂದು ಹೇಳಿದ್ದಾರೆ. ಅಕ್ರಮ ವಲಸೆ ಎಂಬುದು ಯಾವುದೇ ಒಂದು ಸಮುದಾಯ ಅಥ-'ವಾ ಧರ್ಮದ ವಿರುದ್ಧದ ವಿಚಾರವಲ್ಲ. ಇದು ದೇಶದ ಕಾನೂನು, ರಾಷ್ಟ್ರೀಯ ಭದ್ರತೆ ಮತ್ತು ರಾಜ್ಯದ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ವಿಷಯ. ಕಾನೂನುಬದ್ಧವಾಗಿ ಭಾರತಕ್ಕೆ ಬಂದಿರುವ ವಿದೇಶಿಗರಿಗೆ ಯಾವುದೇ ತೊಂದರೆ ನೀಡಬಾರದು. ಆದರೆ ಅಕ್ರಮವಾಗಿ ಪ್ರವೇಶಿಸಿ, ನಕಲಿ ದಾಖಲೆಗಳ ಮೂಲಕ ನೆಲೆಸಿರುವವರ ವಿರುದ್ಧ ಕಾನೂನು ತನ್ನ ಕೆಲಸ ಮಾಡಲೇಬೇಕು. ಇದಕ್ಕಾಗಿ ಮೀನ ಮೇಷ ಎಣಿಸುವ ಯಾವ ಅಗತ್ಯವೂ ಇಲ್ಲ ಎಂದು ಅವರು ತಿಳಿಸಿದ್ದಾರೆ. ಈ ವಿಚಾರದಲ್ಲಿ 'ಶೂನ್ಯ ಸಹಿಷ್ಣುತೆ' ನೀತಿ ಅನುಸರಿಸಲಾಗುವುದು ಹಾಗೂ ಕಾರ್ಯಾಚರಣೆ ನಿರಂತರವಾಗಿ ಮುಂದುವರಿಯಲಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಸ್ಪಷ್ಟಪಡಿಸಿರುವುದನ್ನು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಗತಿಸುತ್ತದೆ. ಇದನ್ನು ಒಂದು ರಾಜಕೀಯ ವಿಷಯವನ್ನಾಗಿ ನೋಡದೆ, ಪ್ರತಿಯೊಬ್ಬ ಕನ್ನಡಿಗರೂ ಈ ಕಾರ್ಯಾಚರಣೆಯನ್ನು ಬೆಂಬಲಿಸಬೇಕು ಎಂದು ಅವರು ಕೋರಿದ್ದಾರೆ. ಗಡಿ ಭದ್ರತೆ ಕೇಂದ್ರ ಸರ್ಕಾರದ ಜವಾಬ್ದಾರಿಯಾದರೆ, ರಾಜ್ಯದೊಳಗೆ ಅಕ್ರಮ ವಲಸಿಗರನ್ನು ಗುರುತಿಸಿ ಕಾನೂನುಬದ್ಧ ಕ್ರಮ ಕೈಗೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ, ಅಕ್ರಮ ವಲಸೆಯ ಮೂಲವನ್ನೇ ಪತ್ತೆಹಚ್ಚುವ ಅಗತ್ಯವಿದೆ. ಇಷ್ಟೊಂದು ಪ್ರಮಾಣದಲ್ಲಿ ಬಾಂಗ್ಲಾ ವಲಸಿಗರು ಹೇಗೆ ಭಾರತವನ್ನು ಪ್ರವೇಶಿಸುತ್ತಿದ್ದಾರೆ ಎಂಬುದರ ಕುರಿತು ಕೇಂದ್ರ ಸರ್ಕಾರ ತನಿಖೆ ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಕರ್ನಾಟಕದ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ರಾಜ್ಯದ ಹಿತಾಸಕ್ತಿಯ ರಕ್ಷಣೆಯ ವಿಚಾರದಲ್ಲಿ ಸರ್ಕಾರ ಕೈಗೊಳ್ಳುವ ಪ್ರತಿಯೊಂದು ಕಾನೂನುಬದ್ಧ ಕ್ರಮಕ್ಕೂ ಕರ್ನಾಟಕ ರಕ್ಷಣಾ ವೇದಿಕೆ ಬೆಂಬಲವಾಗಿ ನಿಲ್ಲಲಿದೆ ಎಂದು ಘೋಷಿಸಿರುವ ಟಿ.ಎ.ನಾರಾಯಣಗೌಡ ಅವರು, ಅಕ್ರಮ ವಲಸೆಯ ವಿರುದ್ಧ ದಿಟ್ಟ ನಿಲುವು ತಳೆದಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಅಭಿನಂದಿಸಿದ್ದಾರೆ. ಹಾಗೆಯೇ ಕರ್ನಾಟಕಕ್ಕೆ ಉತ್ತರದ ರಾಜ್ಯಗಳಿಂದ ಕ್ರಿಮಿನಲ್ ಹಿನ್ನೆಲೆಯ ವಲಸಿಗರು ಪ್ರವೇಶಿಸಿ, ಇಲ್ಲಿ ಅನೇಕ ಕ್ರಿಮಿನಿಲ್ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಅಂಥವರನ್ನು ಸಹ ಗುರುತಿಸಿ ಅವರ ರಾಜ್ಯಗಳಿಗೆ ಹಿಂದಕ್ಕೆ ಕಳಿಸುವ ಅಭಿಯಾನವನ್ನೂ ಸರ್ಕಾರ ಮಾಡಬೇಕು. ಕರ್ನಾಟಕ ಶಾಂತಿಪ್ರಿಯ ರಾಜ್ಯ. ಹೊರರಾಜ್ಯಗಳಿಂದ ಇಲ್ಲಿಗೆ ಬಂದು ಕ್ರಿಮಿನಲ್ ಚಟುವಟಿಕೆ ನಡೆಸುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಕರ್ನಾಟಕದ ಭದ್ರತೆ ನಮ್ಮ ಮೊದಲ ಆದ್ಯತೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

## ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಜಮೀನುಗಳಿಗೆ ಸಚಿವ ಟಿ. ರಘುಮೂರ್ತಿ ಭೇಟಿ, ಪರಿಶೀಲನೆ.

ಅ.ಶ. ಸುದ್ದಿ ಚಿತ್ರದುರ್ಗ

**ಚಿತ್ರದುರ್ಗ: ಜಿಲ್ಲಾ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳ ಉಸ್ತುವಾರಿ ಸಚಿವ ಟಿ. ರಘುಮೂರ್ತಿ ಅವರು ಶನಿವಾರ ಹೊಳಲ್ಕೆರೆ ತಾಲ್ಲೂಕಿನ ರಂಗಾಪುರ, ರಾಮಗಿರಿ ಗ್ರಾಮಗಳ ರೈತರ ಜಮೀನುಗಳಿಗೆ ಭೇಟಿ ನೀಡಿ, ಬೆಳೆ ಹಾನಿ ಮತ್ತು ಪ್ರಕೃತಿ ವಿಕೋಪ ಪೀಡಿತ ಪ್ರದೇಶಗಳ ಪರಿಶೀಲನೆ ನಡೆಸಿದರು.**

ಕೃಷಿ ಅಧಿಕಾರಿಗಳಿಂದ ಬೆಳೆ ಬಿತ್ತನೆ, ವಿಮೆ ಹಾಗೂ ಹಾನಿಯ ಕುರಿತು ಮಾಹಿತಿ ಪಡೆದ ಸಚಿವರು, ರೈತರಿಗೆ ಬೆಳೆ ವಿಮೆಯ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ರಾಗಿ ಬಿತ್ತನೆಗೆ ಇನ್ನೂ ಅವಕಾಶವಿದ್ದು, ರಾಗಿ ಬಿತ್ತನೆ ಮಾಡ ಬಯಸುವ ರೈತರು ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸಿಕೊಂಡು ಬಿತ್ತನೆ ಮಾಡಬೇಕು. ಮಳೆ ಅಭಾವ ಅಥವಾ ವೈಪರೀತ್ಯ ಉಂಟಾದರೂ ವಿಮೆ ವ್ಯಾಪ್ತಿಯಡಿ ರೈತರಿಗೆ ಆರ್ಥಿಕ ನಷ್ಟ ತಡೆಯಲು ಪರಿಹಾರ ಸಿಗಲಿದೆ ಎಂದು ಸಚಿವರು ಹೇಳಿದರು.



ಅಲ್ಲದೆ, ಮಧ್ಯಂತರ ಬೆಳೆ ನಷ್ಟ, ಪ್ರಿವೆಂಟಿವ್ ಸೋಯಿಂಗ್ ಹಾಗೂ ರೆಗ್ಯುಲರ್ ವಿಮೆ ನಿಯಮಗಳಡಿ ಪ್ರತಿಯೊಬ್ಬ ಅರ್ಹ ರೈತರಿಗೂ ಪರಿಹಾರ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಜಂಟಿ ಕೃಷಿ ನಿರ್ದೇಶಕ ಬಿ.ಮಂಜುನಾಥ್ ಮಾತನಾಡಿ, ಹೊಳಲ್ಕೆರೆ ತಾಲ್ಲೂಕಿನಲ್ಲಿ 50,000 ಹೆಕ್ಟೇರ್ ಕೃಷಿ ಭೂಮಿಯಿದ್ದು, ಒಟ್ಟು 48,000 ರೈತರ ಪೈಕಿ ಇದುವರೆಗೆ 26,000 ಕ್ಕೂ ಹೆಚ್ಚು ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು. ಕಳೆದ ಎರಡು ತಿಂಗಳಿಂದ ಮಳೆ ಬಾರದ ಹಿನ್ನೆಲೆಯಲ್ಲಿ ಮುಸುಕಿನ ಜೋಳ ಬಿತ್ತನೆ ತೀವ್ರ ಕುಂಠಿತಗೊಂಡಿದೆ. ನಿಗದಿತ 38,678 ಹೆಕ್ಟೇರ್ ಪೈಕಿ ಕೇವಲ 5,035 ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ.

ಹೀಗಾಗಿ ರೈತರು ಪರ್ಯಾಯ ಬೆಳೆಯಾಗಿ ರಾಗಿ ಬಿತ್ತನೆ ಮಾಡಲು ಮುಂದಾಗಿದ್ದಾರೆ ಎಂದು ತಿಳಿಸಿದರು. ರಾಗಿ ಬಿತ್ತನೆಗೆ 6,550 ಹೆಕ್ಟೇರ್ ಗುರಿ ಹೊಂದಲಾಗಿದ್ದು, ಈಗಾಗಲೇ 1,265 ಹೆಕ್ಟೇರ್ ಬಿತ್ತನೆಯಾಗಿದೆ. ರಾಗಿ ಬಿತ್ತನೆಗೆ ಕಾಲಾವಕಾಶವಿದ್ದು, ಬೆಳೆವಿಮೆ ಮಾಡಿಸಿ ರಾಗಿ ಬಿತ್ತನೆ ಮಾಡಲು ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಹೊಳಲ್ಕೆರೆ ಶಾಸಕ ಡಾ. ಎಂ.ಚಂದ್ರಪ್ಪ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಡಾ.ಕೆ.ಜೆ.ಕಾಂತರಾಜ್ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಇದ್ದರು.

## ಜನಸೇವೆಯ ಶಿಡ್ಲಘಟ್ಟದ ಶಾಸಕ ಬಿ.ಎನ್. ರವಿಕುಮಾರ್ ಜನ್ಮದಿನಾಚರಣೆ

## ಜೆಡಿಎಸ್ ಮುಖಂಡರು, ಅಭಿಮಾನಿಗಳಿಂದ ಅರ್ಥಪೂರ್ಣ ಸಂಭ್ರಮ



ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ: ಕ್ಷೇತ್ರದ ಜನಪ್ರಿಯ ಶಾಸಕರಾದ ಬಿ.ಎನ್. ರವಿಕುಮಾರ್ ಅವರ ಜನ್ಮದಿನವನ್ನು ನಗರದಲ್ಲಿ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಪಾರ ಸಂಖ್ಯೆಯ ಅಭಿಮಾನಿಗಳು ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅತ್ಯಂತ ಸಂಭ್ರಮ-ಸಡಗರದಿಂದ ಆಚರಿಸಿದರು.**



ನಗರದ ಅಂಧ ಮಕ್ಕಳ ಶಾಲೆಯ ಮುಂಭಾಗದಲ್ಲಿ ಜಮಾಯಿಸಿದ್ದ ನೂರಾರು ಜೆಡಿಎಸ್ ಕಾರ್ಯಕರ್ತರು ಹಾಗೂ ಶಾಸಕರ ಅಭಿಮಾನಿಗಳು ಬೃಹತ್ ಕೇಕ್ ಕತ್ತರಿಸಿ, ಸಿಹಿ ಹಂಚಿ ತಮ್ಮ ನೆಚ್ಚಿನ ನಾಯಕನಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಶಾಸಕರ ದೀರ್ಘಾಯುಷ್ಯ ಹಾಗೂ ಆರೋಗ್ಯಕ್ಕಾಗಿ ಪ್ರಾರ್ಥಿಸಲಾಯಿತು. ಮಕ್ಕಳಿಗೆ ಸಮವಸ್ತ್ರ, ಶೂ ಹಾಗೂ ಬೆಡ್ ಶೀಟ್‌ಗಳನ್ನು ವಿತರಿಸಿ ಮಾನವೀಯತೆ ಮೆರೆದರು. ಕಾರ್ಯಕ್ರಮದ ಭಾಗವಾಗಿ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು.

ಮುಂದುವರೆದು ನಗರದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಮುಖಂಡರು, ಅಲ್ಲಿದ್ದ ಒಳರೋಗಿಗಳ ಯೋಗಕ್ಷೇಮ ವಿಚಾರಿಸಿ ಅವರಿಗೆ ಹಣ್ಣು-ಹಂಪಲು ಮತ್ತು ಬ್ರೆಡ್ ವಿತರಿಸಿದರು. ಈ ಸಂದರ್ಭದಲ್ಲಿ ಚಿಮುಲ್ ನಿರ್ದೇಶಕರಾದ ಬಂಕ್ ಮುನಿಯಪ್ಪಣ ಹುಜಗೂರು ರಾಮಣ್ಣ, ಶಾಸಕರ ಆಪ್ತರಾದ ತಾದೂರು ರಘು, ಜೆಡಿ-ಎಸ್ ತಾಲೂಕು ಅಧ್ಯಕ್ಷ ವೆಂಕಟೇಶಪ್ಪ, ನಗರಸಭೆ ಮಾಜಿ ಅಧ್ಯಕ್ಷ ವೆಂಕಟಸ್ವಾಮಿ, ಮಾಧ್ಯಮ ಉಸ್ತುವಾರಿ ಚೌಡಸಂದ್ರ ಗಜೇಂದ್ರ, ಮುಖಂಡರಾದ ನಂದುಕಿಶನ್, ಮುಗಲಡಿಪಿ ನಂಜಪ್ಪ, ಎಸ್.ಎಂ. ರಮೇಶ್, ಅಮಾನುಲ್ಲಾ, ಇಂತಿಯಾಜ್ ಪಾಷ, ಪ್ರದೀಪ್ (ದೀಪು) ಖದೀರ್ ಸೇರಿದಂತೆ ಜೆಡಿಎಸ್ ಪಕ್ಷದ ಹಲವು ಮುಖಂಡರು, ನೂರಾರು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದ ಶಾಸಕ ಬಿ.ಎನ್. ರವಿಕುಮಾರ್

ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ: ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಬಿ.ಎನ್. ರವಿಕುಮಾರ್ ಅವರು ತಮ್ಮ ಜನ್ಮದಿನದ ಪ್ರಯುಕ್ತ ಪ್ರತಿವರ್ಷದಂತೆ ಈ ವರ್ಷವೂ ಕುಟುಂಬ ಸಮೇತರಾಗಿ ಕಲಿ ಯುಗದ ಪ್ರತ್ಯಕ್ಷ ದೈವ ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಯ ದಿವ್ಯ ದರ್ಶನ ಪಡೆದರು.**

ಶ್ರೀ ವಾರಿ ಸನ್ನಿಧಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಶಾಸಕರು, ಕ್ಷೇತ್ರದ ಸಮಸ್ತ ಜನತೆಯ ಸುಖ, ಶಾಂತಿ, ನೆಮ್ಮದಿ, ಉತ್ತಮ ಆರೋಗ್ಯ ಹಾಗೂ ಸಮೃದ್ಧಿಗಾಗಿ



**"ಶ್ರೀ ವೆಂಕಟೇಶ್ವರ ಸ್ವಾಮಿಯ ಆಶೀರ್ವಾದ ಸದಾ ನಮ್ಮ ಕ್ಷೇತ್ರದ ಸಮಸ್ತ ಜನತೆಯ ಮೇಲಿರಲಿ. ಎಲ್ಲರ ಬದುಕಿನಲ್ಲೂ ಸುಖ-ಸಮೃದ್ಧಿ ನೆಲೆಸಲಿ ಎಂಬುದೇ ನನ್ನ ಆಶಯ"**

**- ಬಿ.ಎನ್. ರವಿಕುಮಾರ್, ಶಾಸಕರು, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರ.**

ಪ್ರಾರ್ಥಿಸಿದರು. ಅಲ್ಲದೆ, ನಾಡಿನಲ್ಲಿ ಉತ್ತಮ ಮಳೆ-ಬೆಳೆಯಾಗಿ ಎಲ್ಲರ ಜೀವನದಲ್ಲೂ ಹರ್ಷ ನೆಲೆಸಲಿ ಎಂದು ಶ್ರೀ ವೆಂಕಟರಮಣ ಸ್ವಾಮಿಯಲ್ಲಿ ವಿಶೇಷ ಹಾರೈಕೆ ಮಾಡಿದರು.

## ಫೈವ್‌ಸ್ಟಾರ್ ಹೋಟೆಲ್‌ಗಳಲ್ಲೇ ಅವಧಿ ಮೀರಿದ ಆಹಾರ ಪತ್ತೆ : ಸಿರಿವಂತರ ನಂಬಿಕೆಗೆ ದೊಡ್ಡ ಅಘಾತ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಫೈವ್‌ಸ್ಟಾರ್ ಹೋಟೆಲ್ ಎಂದರೆ ಗುಣಮಟ್ಟ, ಸ್ವಚ್ಛತೆ ಮತ್ತು ಸುರಕ್ಷಿತ ಆಹಾರದ ಖಾತರಿ ಎಂಬ ನಂಬಿಕೆಯೇ ಸಾಮಾನ್ಯ. ಆದರೆ ಬೆಂಗಳೂರಿನ ಪ್ರತಿಷ್ಠಿತ ತ್ರೀ-ಸ್ಟಾರ್ ಮತ್ತು ಫೈವ್‌ಸ್ಟಾರ್ ಹೋಟೆಲ್‌ಗಳಲ್ಲಿ ಆಹಾರ ಸುರಕ್ಷತಾ ಇಲಾಖೆ ನಡೆಸಿದ ವಿಶೇಷ ತಪಾಸಣೆ ಈ ನಂಬಿಕೆಗೆ ಆಘಾತ ನೀಡಿದೆ.**

ನಗರದ 26 ಪ್ರತಿಷ್ಠಿತ ಹೋಟೆಲ್‌ಗಳ ಮೇಲೆ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದು, ಅವಧಿ ಮೀರಿದ ಆಹಾರ ಪದಾರ್ಥಗಳು, ಅಸ್ವಚ್ಛ ಸಂಗ್ರಹಣೆ, ಸರಿಯಾದ ಲೇಬಲಿಂಗ್ ಇಲ್ಲದ ಆಹಾರ ಮತ್ತು ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆಗಳು ಪತ್ತೆಯಾಗಿವೆ. ಆಗಸ್ಟ್ 7ರಂದು ಆಹಾರ ಸುರಕ್ಷತಾ ಇಲಾಖೆಯ 30 ತಂಡಗಳು ಬೆಂಗಳೂರಿನ ವಿವಿಧ ತ್ರೀ-ಸ್ಟಾರ್ ಮತ್ತು ಫೈವ್‌ಸ್ಟಾರ್ ಹೋಟೆಲ್‌ಗಳಲ್ಲಿ ತಪಾಸಣೆ ನಡೆಸಿದವು. ತಪಾಸಣೆಯ ವೇಳೆ 35 ವಿವಿಧ ಆಹಾರ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಲಾಗಿದೆ. ಆಹಾರ ಪದಾರ್ಥಗಳ ಗುಣಮಟ್ಟ, ಅವುಗಳಲ್ಲಿ ಕಲಬೆರಕೆ ಅಥವಾ ಆರೋಗ್ಯಕ್ಕೆ ಹಾನಿಕಾರಕ ಅಂಶಗಳಿವೆಯೇ ಎಂಬುದನ್ನು ಪ್ರಯೋಗಾಲಯ ಪರೀಕ್ಷೆಯಿಂದ ಪರಿಶೀಲಿಸಲಾಗುತ್ತದೆ.

ತಪಾಸಣೆಯ ವೇಳೆ ರ್‍ಯಾಡಿಸನ್ ಬ್ಲೂ





ಅಟ್ರಿಯಾ ಹೋಟೆಲ್‌ನಲ್ಲಿ ಭಾರೀ ಪ್ರಮಾಣದ ಅವಧಿ ಮೀರಿದ ಆಹಾರ ಪತ್ತೆಯಾಗಿರುವುದು ಅಧಿಕಾರಿಗಳನ್ನೇ ಬೆಚ್ಚಿಬೀಳಿಸಿದೆ. ಸುಮಾರು 105 ಕೆಜಿ ಅವಧಿ ಮೀರಿದ ಆಹಾರ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇದರಲ್ಲಿ ಸುಮಾರು 50 ಕೆಜಿ ಚಿಕನ್, 20 ಕೆಜಿಗೂ ಅಧಿಕ ಮಟನ್, 23 ಕೆಜಿ ಮೀನು ಸೇರಿದಂತೆ ವಿವಿಧ ಆಹಾರ ಪದಾರ್ಥಗಳು ಸೇರಿವೆ. ಅವಧಿ ಮೀರಿದ ಮಾಂಸ ಮತ್ತು ಮೀನುಗಳನ್ನು ಹೋಟೆಲ್‌ನ ಆಹಾರ ಸಂಗ್ರಹಣಾ ಪ್ರದೇಶದಲ್ಲೇ ಇರಿಸಲಾಗಿತ್ತು ಎನ್ನಲಾಗಿದೆ. ಪ್ರತಿಷ್ಠಿತ ದಿ ಲಾಲಿತ್ ಅಶೋಕ್ ಹೋಟೆಲ್‌ನಲ್ಲಿಯೂ ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆ ಪತ್ತೆಯಾಗಿದೆ. ಸುಮಾರು 30 ಲೀಟರ್‌ಗೂ ಅಧಿಕ ಅವಧಿ ಮೀರಿದ ಹಾಲು ಸೇರಿದಂತೆ ಹೆಚ್ಚಿನ ಪ್ರಮಾಣದ ತರಕಾರಿಗಳನ್ನು ಅಧಿಕಾರಿಗಳು ಪತ್ತೆಹಚ್ಚಿದ್ದಾರೆ. ಕೆಲವು ತರಕಾರಿಗಳಲ್ಲಿ ಶಿಲೀಂಧ್ರ ಬೆಳವಣಿಗೆಯೂ ಕಂಡುಬಂದಿದೆ ಎಂದು ಅಧಿಕಾರಿಗಳ ಪರಿಶೀಲನೆಯಲ್ಲಿ ತಿಳಿದುಬಂದಿದೆ.

ವಿವಾಂತಾ ಹೋಟೆಲ್‌ನಲ್ಲಿಯೂ ಅವಧಿ ಮೀರಿದ ಬೇಕರಿ ಉತ್ಪನ್ನಗಳು ಪತ್ತೆಯಾಗಿವೆ. ಸುಮಾರು ಮೂರು ಕೆಜಿ ಬೇಕರಿ ಉತ್ಪನ್ನಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಇತರ ಕೆಲವು ಹೋಟೆಲ್‌ಗಳಲ್ಲಿಯೂ ಆಹಾರ ಉತ್ಪನ್ನಗಳ ಮೇಲೆ ಸರಿಯಾದ ಲೇಬಲ್ ಇಲ್ಲದಿರುವುದು, ಉತ್ಪನ್ನಗಳ ವಿವರಗಳನ್ನು ಸಮರ್ಪಕವಾಗಿ ನಮೂದಿಸದಿರುವುದು ಮತ್ತು ಆಹಾರ ಸಂಗ್ರಹಣೆಯಲ್ಲಿ ಅಗತ್ಯ ಮುನ್ನೆಚ್ಚರಿಕೆಗಳನ್ನು ಪಾಲಿಸದಿರುವುದು ಕಂಡುಬಂದಿದೆ. ಅಧಿಕಾರಿಗಳ ತಪಾಸಣೆಯಲ್ಲಿ ಕೇವಲ ಅವಧಿ ಮೀರಿದ ಆಹಾರ ಪತ್ತೆಯಾಗಿರುವುದಷ್ಟೇ ಅಲ್ಲ, ಆಹಾರ ಸಂಗ್ರಹಣೆಯ ವಿಧಾನದಲ್ಲಿಯೂ ಗಂಭೀರ ಲೋಪಗಳು ಕಂಡುಬಂದಿವೆ.

ಕೆಲವು ಕಡೆ ಸಸ್ಯಾಹಾರಿ ಮತ್ತು

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka